## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ۔


بِسْمِ اللّٰہِ الرَّحْمٰنِ الرَّحِیْمِ نَحْمَدُہٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَکُمُ اللّٰہُ بِبَدْرٍ وَّاَنْتُمْ اَذِلَّۃٌ

ವರ್ಷ: 01

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN
KANNADA

ಸಂಚಿಕೆ: 47

ವಾರ್ಷಿಕ ಶುಲ್ಕ ರೂ.500/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

03 ಡಿಸೆಂಬರ್ 2020, 03 ಫತಹ್ 1399 ಹಿಜರಿ ಶಮ್‌ಸಿ,
17 ರಬಿಉಸ್ಸಾನಿ 1442 ಹಿಜರಿ ಖಮರಿ.


## ಅಲ್ಲಾಹನ ಉಪದೇಶ

وَمَنْ یَّعْمَلْ مِنَ الصّٰلِحٰتِ مِنْ ذَکَرٍ اَوْ اُنْثٰی وَھُوَ مُؤْمِنٌ فَاُولٰٓئِکَ یَدْخُلُوْنَ الْجَنَّۃَ وَلَا یُظْلَمُوْنَ نَقِیْرًا (النساء:125)

*(ಅನ್ನಿಸಾಅ್:125)*

ಅಂದರೆ: ಸತ್ಯವಿಶ್ವಾಸಿಯಾಗಿರುವ ಪುರುಷನಾಗಲಿ ಸ್ತ್ರೀಯಾಗಲಿ, ಅವರು ಸತ್ಕರ್ಮಗಳನ್ನು ಮಾಡಿದರೆ, ಅವರು ಸ್ವರ್ಗದಲ್ಲಿ ಪ್ರವೇಶಿಸುವರು. ಅವರಿಗೆ ಲವಲೇಶವಾದರೂ ಅನ್ಯಾಯವಾಗದು.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ನಮಾಝಿಗೆ ಇಖಾಮತ್ ತಕ್ಬೀರ್‌ಗಳನ್ನು ಕೇಳಿ ಓಡಿ ಬರಬೇಡಿ

* ಅಖಾಯ ಬಿನ್ ರಿಫಾಅ ವರದಿ ಮಾಡುತ್ತಾರೆ. ನಾನು ಜುಮುಅ ನಮಾಝಿಗೆ ಹೋಗುತ್ತಿದ್ದೆ. ನನಗೆ ಹಝ್ರತ್ ಅಬೂ ಅಖದ್ (ಅಬ್ದುರ್ ರಹ್ಮಾನ್ ಬಿನ್ ಜಬರ್(ರ)) ಎದುರಾದರು ಮತ್ತು ಅವರು ಹೇಳಿದರು. ನಾನು ನಬಿ(ಸ) ರವರು ಹೇಳಿದ್ದು ಕೇಳಿದ್ದೇನೆ. ಯಾರ ಹೆಜ್ಜೆಗಳು ಅಲ್ಲಾಹನ ಮಾರ್ಗಗಳಲ್ಲಿ ಧೂಳಿನಿಂದ ಆವರಿಸಲ್ಪಡುವುದೋ ಅದರ ಮೇಲೆ ಅಲ್ಲಾಹನ ಅಗ್ನಿ ನಿಷೇಧಿಸಲ್ಪಡುವುದು.

* ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ನಾನು ರಸೂಲುಲ್ಲಾಹ್(ಸ) ಅವರಿಂದ ಕೇಳಿದ್ದೆನೆ ಅವರು ಹೇಳುತ್ತಿದ್ದರು. ತಕ್ಬೀರ್ ಇಖಾಮತ್ ಆಗುವುದನ್ನು ಕೇಳಿ ಧಾವಿಸಿ ಬರಬೇಡಿ ಬದಲು ಮಾಮೂಲಿಯಂತೆ ನಡೆದುಕೊಂಡು ಬನ್ನಿರಿ. ಮತ್ತು ಸಮಾಧಾನ ವಹಿಸಿರಿ, ಎಷ್ಟು ಭಾಗ ನಮಾಝ್ ಲಭಿಸುತ್ತದೆಯೋ ಅಷ್ಟನ್ನು ನಿರ್ವಹಿಸಿರಿ. ಎಷ್ಟು ನಿಮ್ಮಿಂದ ಉಳಿದಿರುತ್ತದೆ ಅಷ್ಟನ್ನು ನಂತರ ನಿರ್ವಹಿಸಿಕೊಳ್ಳಿ.

* ಅಬ್ದುಲ್ಲ ಬಿನ್ ಅಬಿ ಖತಾದ ನನ್ನ ತಂದೆಯಿಂದ ವರದಿ ಮಾಡುತ್ತಾರೆ. ನಬಿ(ಸ) ಹೇಳಿದರು. ನಾನು ಏಳುವುದನ್ನು ನೋಡುವವರರೆಗೆ ನೀವು ಏಳಬೇಡಿರಿ. ಸಮಾಧಾನದಿಂದ ಏಳಿರಿ.

**(ಸಹೀ ಬುಖಾರಿ ಸಂಪುಟ 2 ಕಿತಾಬುಲ್ ಜುಮುಅ ಮುದ್ರಣ ಖಾದಿಯಾನ್ 2006)**

ಆಧ್ಯಾತ್ಮಿಕ ಪರಿಶುದ್ಧತೆ ಬಯಸುವವರಿಗೆ ದೈಹಿಕ ಪರಿಶುದ್ಧತೆ ಮತ್ತು ಸ್ವಚ್ಛತೆಯೂ ಅವಶ್ಯಕವಾಗಿದೆ. ಏಕೆಂದರೆ ಒಂದು ಶಕ್ತಿಯ ಪ್ರಭಾವ ಇನ್ನೊಂದರ ಮೇಲೂ ಆಗುವುದು ಸಹಜವಾಗಿದೆ. ಆದುದರಿಂದ ಕನಿಷ್ಠ ಜುಮಅ ಗುಸುಲ್ (ಸ್ನಾನ) ಮಾಡುವುದು ಅನಿವಾರ್ಯವಾಗಿದೆ. ಪ್ರತಿ ನಮಾಝಿನ ಸಮಯ ವುಝು ಮಾಡಿರಿ. ಜಮಾಅತ್ ನಮಾಝಿಗೆ ನಿಲ್ಲುವಾಗ ಸುಗಂಧ ಹಚ್ಚಿಕೊಳ್ಳಿರಿ.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಪ್ಲೇಗ್ ಭಯಂಕರವಾದ ಶಿಕ್ಷೆ ಆಗಿದೆ

ಅಲ್ಲಾಹನು ಅದರ ಹೆಸರು **"ರುಜ್‌ಝ್"** ಎಂದು ಇಟ್ಟಿದ್ದಾನೆ. **"ರುಜುಝ್"** ನ ಒಂದು ಅರ್ಥ ಶಿಕ್ಷೆಯೂ ಎಂದಾಗಿದೆ. ವ್ಯಾಕರಣದ ಗ್ರಂಥಗಳಲ್ಲಿ ಬರೆಯಲಾಗಿದೆ ಒಂಟೆಯ ತೊಡಿನಲಿ ಈ ರೋಗವಿರುತ್ತದೆ. ಅದರಲ್ಲಿ ಒಂದು ಹುಳ ಬೀಳುತ್ತದೆ. ಅದನ್ನು **"ನಫ಼ಫ್"** ಎನ್ನುತ್ತಾರೆ. ಆದರಿಂದ ಒಂದು ಸೂಕ್ಷ್ಮವಾದ ವಿಷಯ ತಿಳಿದು ಬರುವುದೇನೆಂದರೆ ಒಂಟೆಯು ಸ್ವಭಾವದಲ್ಲಿ ಒಂದು ರೀತಿಯ ದಂಗೆ ಏಳುವ ಪ್ರವೃತ್ತಿಯಿರುತ್ತದೆ. ಹಾಗೆ ಮನುಷ್ಯರಲ್ಲಿ ಆ ಪ್ರವೃತ್ತಿ ಉಂಟಾದರೆ ಭಯಂಕರವಾದ ಶಿಕ್ಷೆ ಅವತರಣಗೊಳ್ಳುತ್ತದೆ..... ಹಾಗೆಯೇ ಈ ರೋಗ ದೀರ್ಘ ಸಮಯದವರೆಗೆ ಇರುವಂತಹದ್ದಾಗಿದೆ. ಹಾಗೆಯೇ ಈ ರೋಗ ದೀರ್ಘ ಸಮಯದವರೆಗೆ ಇರುವಂತಹದ್ದಾಗಿದೆ. ಮನೆಯಿಂದ ಎಲ್ಲರನ್ನು ಅಗಲಿಸಿಯೇ ಬಿಡುತ್ತದೆಂದು ವ್ಯಕ್ತವಾಗುತ್ತದೆ. ಈ ಆಪತ್ತು ಮನೆಗಳನ್ನು ಖಾಲಿ ಮಾಡಿಬಿಡುತ್ತದೆ. ಮಕ್ಕಳನ್ನು ಅನಾಥರನ್ನಾಗಿ ಮಾಡುತ್ತದೆ ಮತ್ತು ಅಸಂಖ್ಯಾತ ನಿರ್ಗತಿಕ ಮಹಿಳೆಯರನ್ನು ವಿಧವೆಯರನ್ನಾಗಿ ಮಾಡುತ್ತದೆ.

**'ರುಜ್‌ಝ್'** ಅರ್ಥದ ಬಗ್ಗೆ ಗಾಢವಾಗಿ ಆಲೋಚಿಸಿದರೆ ತಿಳಿದು ಬರುವುದೇನೆಂದರೆ ಈ ರೋಗ ಹೊಲಸು ಮತ್ತು ಅಶುದ್ಧತೆಯಿಂದ ಉಂಟಾಗುತ್ತದೆ. ಎಲ್ಲಿ ಸ್ವಚ್ಛತೆ ಇರುವುದಿಲ್ಲವೊ. ಅಲ್ಲಿ ಮನೆಯ ಗೋಡೆಗಳು ಹಾಳಾಗಿ ಗೋರಿಗಳಂತೆ ಕಾಣುತ್ತವೆ. ಅಲ್ಲಿ ಬೆಳಕೂ ಬರುವುದಿಲ್ಲ. ಗಾಳಿಯೂ ಬರುವುದಿಲ್ಲ. ಅಂತಹದರಲ್ಲಿ ಮರಣಾಂತಿಕ ವಿಷಜಂತುಗಳು ಹುಟ್ಟಿ ಅದರಿಂದ ಈ ರೋಗ ಬರುತ್ತದೆ. ಪವಿತ್ರ ಖುರ್‌ಆನಿನಲ್ಲಿ ಬರುತ್ತದೆ. "ವರ್‍ರುಜ್‌ಝ್ ಫಹ್‌ಜರ್" (ಅಲ್–ಮುದಸ್ಸಿರ್–6) ಎಲ್ಲ ರೀತಿಯ ಮಾಲಿನ್ಯದಿಂದ ದೂರವಿರಿ ಹಿಜ್‌ರ್ ಎಂದರೆ ಪಲಾಯನ ಮಾಡುವುದು ಎಂದರ್ಥ. ಅದರಿಂದ ತಿಳಿದು ಬರುವುದೇನೆಂದರೆ ಆಧ್ಯಾತ್ಮಿಕ ಪರಿಶುದ್ಧತೆ ಬಯಸುವವರಿಗೆ ದೈಹಿಕ ಪರಿಶುದ್ಧತೆ ಮತ್ತು ಸ್ವಚ್ಛತೆಯೂ ಅವಶ್ಯಕವಾಗಿದೆ. ಏಕೆಂದರೆ ಒಂದು ಶಕ್ತಿ ಇನ್ನೊಂದರ ಮೇಲಾಗುವುದು ಸಹಜವಾಗಿದೆ.

### ದೈಹಿಕ ಪರಿಶುದ್ಧತೆಯ ಪರಿಣಾಮ ಅಂತರಂಗದಲ್ಲೂ ಬೀರುತ್ತದೆ.

ಎರಡು ಸ್ಥಿತಿಗಳಿವೆ. ಯಾರು ಆಂತರಿಕ ಭಕ್ತಿ ಮತ್ತು ಪರಿಶುದ್ಧತೆ ಬಯಸುತ್ತಾರೆ ಅವರು ದೈಹಿಕ ಪರಿಶುದ್ಧತೆಯೂ ಬಯಸುವರು. ಇನ್ನೊಂದು ಸ್ಥಳದಲ್ಲಿ ಅಲ್ಲಾಹನು ಹೇಳುತ್ತಾನೆ. **"ಇನ್ನಲ್ಲಾಹ್ ಯುಹಿಬ್ಬುತ್ತವ್ವಾಬೀನ ವ ಯುಹಿಬ್ಬುಲ್ ಮುತತಹ್ಹಿರೀನ್"** (ಅಲ್–ಬಖರ:223) ಅಂದರೆ ಅಲ್ಲಾಹನು ಬಾಹ್ಯವಾಗಿಯೂ ಆಂತರಿಕವಾಗಿಯೂ ಪರಿಶುದ್ಧರಾಗಿರುವವರನ್ನು ಇಷ್ಟಪಡುತ್ತಾನೆ. ಬಾಹ್ಯ ಪರಿಶುದ್ಧತೆಯೂ ಆಂತರಿಕ ಪರಿಶುದ್ಧತೆಗೆ ಸಹಾಯಕವಾಗಿರುತ್ತದೆ. ಮನುಷ್ಯನು ಹಲಸು ಮಾಡಿ ಆ ಗಲೀಜನ್ನು ತೊಳೆಯದಿದ್ದರೆ ಆಂತರಿಕ ಪರಿಶುದ್ಧತೆ ಬರುವುದಾದರೂ ಹೇಗೆ. ಆದುದರಿಂದ ನೆನಪಿಡಿರಿ. ಬಾಹ್ಯ ಪರಿಶುದ್ಧತೆಯು ಆಂತರಿಕ ಪರಿಶುದ್ಧತೆಗೆ ಅವಶ್ಯಕವಾಗಿದೆ. ಆದುದರಿಂದ ಕನಿಷ್ಠ ಜುಮ ದಿವಸವಾದರೂ ಗುಸುಲ್ (ಸ್ನಾನ) ಮಾಡುವುದು ಅನಿವಾರ್ಯವಾಗಿದೆ. ಪ್ರತಿ ನಮಾಝಿನ ಸಮಯ ವುಝು ಮಾಡಬೇಕು. ಜಮಾಅತ್ ನಮಾಝಿಗೆ ನಿಂತರೆ ಸುಗಂಧ ಹಚ್ಚಿಕೊಳ್ಳಿರಿ.

ಹಬ್ಬಗಳಲ್ಲಿ ಮತ್ತು ಜುಮುಅ ದಿವಸಕ್ಕೆ ಸುಗಂಧ ಹಚ್ಚುವ ಆಜ್ಞೆ ಇದೇ ನೆಲೆಯಲ್ಲಿ ಆಗಿರುತ್ತದೆ ವಾಸ್ತವವೇನೆಂದರೆ ಸಮಾವೇಶದ ವೇಳೆ ಸುಗಂಧ ಹರಡುವ ಸಂಭವವಿರುತ್ತದೆ. ಆದುದರಿಂದ ಸ್ನಾನ ಮಾಡಲು ಮತ್ತು ಸ್ವಚ್ಛ ಬಟ್ಟೆಗಳನ್ನು ಧರಿಸಲು ಹಾಗೂ ಸುಗಂಧ ಹಚ್ಚಲು ಹೇಳಲಾಗಿದೆ. ಅದರಿಂದ ದುರ್ಗಂಧವನ್ನು ತಡೆಯಬಹುದಾಗಿದೆ. ಅಲ್ಲಾಹನು ಆಜ್ಞಾಪಿಸಿದಂತೆ –ಇಹ ಜೀವನದಲ್ಲಿ ಇದ್ದ ಕಾನೂನುಗಳೇ ಪರಲೋಕದಲ್ಲೂ ಪಾಲಿಸಲಾಗುತ್ತದೆ.

**(ಮಲ್ಫೂಝಾತ್, ಸಂಪುಟ 1, 230–231, ಮುದ್ರಣ ಖಾದಿಯನ್ 2018)**

**ಅಲ್ಲಾಹ್ ಮತ್ತು ಅವನ ಪ್ರವಾದಿಗಳ ಮಾತುಗಳನ್ನು ತಮಾಷೆ ಮತ್ತು ಅಪಹಾಸ್ಯದ ಸಂದರ್ಭಗಳಲ್ಲಿ ಬಳಸುವುದು ಅತ್ಯಂತ ಅಪಾಯಕರವಾಗಿದೆ. ಇದು ಮನಸ್ಸನ್ನು ಕಠಿಣವಾಗಿಸುತ್ತದೆ. ಈ ರೀತಿಯ ನಡವಳಿಕೆ ಅಸಭ್ಯರು ಮಾತ್ರ ಹೊಂದುವರು. ಯಾರಲ್ಲಿ ಸಭ್ಯತೆಯಿಲ್ಲವೋ ಅಂತಹವರು ಇಹ ಲೋಕದಲ್ಲು ಸಲ್ಲರು ಪರಲೋಕದಲ್ಲೂ ಸಲ್ಲರು.**

ಅಲ್ಲಾಹನು ಬನೀ ಇಸ್ರಾಯೀಲರಿಗೆ ಆಜ್ಞಾಪಿಸಿದನು. ನೀವು 'ಹಿತ್ತತುನ್' ಎಂದು ಹೇಳಿರಿ ಅಂದರೆ ಓ ಅಲ್ಲಾಹ್ ನಮ್ಮ ಪಾಪಗಳನ್ನು ಕ್ಷಮಿಸು. ಆದರೆ ಅವರು ತಮಾಷೆಯಾಗಿ 'ಹಿಂತಾತುನ್' ಎಂದು ಹೇಳಳಾರಂಭಿಸಿದರು. ಅಂದರೆ ನಮಗೆ ಗೋಧಿ ದೊರೆಯಲಿ. ಅವರಿಗೆ ಗೋಧಿಯ ಬಿಸಿಬಿಸಿ ತಾಜಾ ರೊಟ್ಟಿಗಳ ಆಸೆ ಚಿಗುರಿತು. ಅವರು "ಹಿತ್ತತುನ್' ಅನ್ನು ಬಿಗಡಾಯಿಸಿ "ಹಿಂತತುನ್" ಎಂದು ಹೇಳಲಾರಂಭಿಸಿದರು. ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿದರು.

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ದೇವಭಕ್ತರಾಗಿರುವವರು ನನ್ನ ಸಮೀಪವಾಗಿರುವರು. ಅವರು ಯಾರೇ ಆದರು ಸರಿ ಮತ್ತು ಅವರು ಎಲ್ಲಿಯೇ ಇರುವರಾದರೂ ಸರಿ.**

**ಹಝ್ರತ್ ಮುಆಧ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಅವರನ್ನು ಯಮನಿಗೆ ಕಳುಹಿಸದಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: ಶ್ರೀಮಂತಿಕೆ ಮತ್ತು ಆಡಂಬರದ ಜೀವನವನ್ನು ನಡೆಸುವುದರಿಂದ ದೂರವಿರು. ಏಕೆಂದರೆ, ಅಲ್ಲಾಹನ ದಾಸರು ಆಡಂಬರದ ಜೀವಿತವನ್ನು ಕೈಗೊಳ್ಳುವುದಿಲ್ಲ.**

**ಹಝ್ರತ್ ಪೈಗಂಬರರ(ಸ) ಜೀವಿತಮಾದರಿ ಮತ್ತು ಉಪದೇಶಗಳನ್ನು ಅನುಸರಿಸುವುದಾಗಿದೆ ಯಥಾರ್ಥ ಮೀಲಾದುನ್ನಬಿ ಅಥವಾ ಸೀರತುನ್ನಬಿ ಆಚರಿಸುವ ರೀತಿ.**

---

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಹಝ್ರತ್ ಮುಅಧ್ ಬಿನ್ ಜಬಲ್(ರ) ಹಾಗೂ ಉಹದ್ ಯುದ್ಧದಲ್ಲಿ ಮೊದಲು ಶಹೀದ್ ಆದ ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **30-10-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ- اَلرَّحْمٰنِ الرَّحِيْمِ- مٰلِكِ يَوْمِ الدِّيْنِ-

اِيَّاكَ نَعْبُدُ وَاِيَّاكَ نَسْتَعِيْنُ- اِهْدِنَا الصِّرَاطَ الْمُسْتَقِيْمَ-

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ-

ಕಳೆದ ಖುತ್‌ಬದಲ್ಲಿ ಹಝ್ರತ್ ಮುಆಧ್ ಬಿನ್ ಜಬಲ್‌ರ(ರ) ಪ್ರಸ್ತಾಪ ನಡೆಯುತ್ತಿತ್ತು. ಇಂದೂ ಅದೇ ಜಾರಿಯಲ್ಲಿರುವುದು. ಹಝ್ರತ್ ಮುಆಧ್(ರ) ಬಹಳ ಉದಾರಿಯಾಗಿದ್ದರು. ಬಹಳ ಹೆಚ್ಚಾಗಿ ದಾನಮಾಡುತ್ತಿದ್ದರು. ಆದ್ದರಿಂದ ಅನೇಕ ಬಾರಿ ಸಾಲಗಳನ್ನು ಮಾಡಬೇಕಾಗುತ್ತಿತ್ತು. ಸಾಲ ವಾಪಾಸ್ಸು ಕೇಳಿ ಜನರು ಕಿರುಕುಳ ಮಾಡಲು ತೊಡಗಿದಾಗ, ಅವರು ಸ್ವಲ್ಪ ದಿನಗಳ ಕಾಲ ಮನೆಯಲ್ಲೇ ಅವಿತುಕೊಂಡರು. ಆಗ ಆ ಜನರು ಹಝ್ರತ್‌ಪೈಗಂಬರರ(ಸ) ಬಳಿಗೆ ಬಂದರು ಮತ್ತು ಹಝ್ರತ್ ಮುಆಧ್‌ರಿಂದ(ರ) ಸಾಲ ವಸೂಲು ಮಾಡಲು ವಿನಂತಿಸಿದರು. ಹಝ್ರತ್ ಮುಆಧ್‌ರನ್ನು(ರ) ಕರೆದುಕೊಂಡು ಬರಲು ಹಝ್ರತ್ ಪೈಗಂಬರ್(ಸ) ಒಬ್ಬರೊಡನೆ ಹೇಳಿದರು. ಹಝ್ರತ್ ಮುಆಧ್‌ರ(ರ) ಸಾಲಗಳು ಅವರ ಆಸ್ತಿಗಿಂತ ಹೆಚ್ಚಾದಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: ಯಾರು ಸಾಲದ ತನ್ನ ಭಾಗವನ್ನು ಹಝ್ರತ್ ಮುಆದ್‌ರಿಂದ(ರ) ಮರಳಿ ಪಡೆಯುವುದಿಲ್ಲವೋ ಅಲ್ಲಾಹನು ಅವರ ಮೇಲೆ ಕೃಪೆದೋರುವನು. ಆಗ ಕೆಲವರು ಅವರಿಗೆ ಸಿಗಬೇಕಾದ ಸಾಲವನ್ನು ಮನ್ನಾ ಮಾಡಿದರು.ಆದರೂ ಕೆಲವರು ಅವರಿಗೆ ಸಿಗಬೇಕಾದ ಸಾಲವನ್ನು ಬೇಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಎಲ್ಲ ಸೊತ್ತುಗಳನ್ನು ಅವರಲ್ಲಿ ವಿತರಿಸಿದರು. ಆದರೂ ಸಾಲ ಪೂರ್ಣವಾಗಿ ಸಂದಾಯವಾಗಲಿಲ್ಲ. ಬದಲಿಗೆ, ಪ್ರತಿಯೊಬ್ಬರಿಗೂ ಸಾಲದ ಸ್ವಲ್ಪ ಭಾಗ ಲಭಿಸಿತು. ಉಳಿದ ಸಾಲವನ್ನು ಸಹ ಸಂದಾಯ ಮಾಡಬೇಕೆಂದಾಗಿತ್ತು ಸಾಲಕೊಟ್ಟವರ ಬೇಡಿಕೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಅವರನ್ನು ಬಿಟ್ಟುಬಿಡಿರಿ. ಈಗ ಇದಕ್ಕಿಂತ ಹೆಚ್ಚು ಸಿಗಲಿಕ್ಕಿಲ್ಲ. ಸಿಕ್ಕಿದ್ದನ್ನು ತೆಗೆದುಕೊಂಡು ಹೋಗಿರಿ. ಹಝ್ರತ್ ಮುಆಧ್‌ರ(ರ) ಬಳಿ ಬಾಕಿಯಾಗಿ ಏನೂ ಇಲ್ಲದೆ ಬಂದಾಗ, ಹಝ್ರತ್ ಪೈಗಂಬರ್(ಸ) ಅವರನ್ನು ಯಮನಿನ ಕಡೆಗೆ ಹೀಗೆ ಹೇಳಿ ಕಳುಹಿಸಿದರು: ಅಲ್ಲಾಹನು ಬಹುಶಃ ನಿನ್ನ ಸಂಪತ್ತಿನ ಕೊರತೆಯನ್ನು ನೀಗಿಸುವನು ಮತ್ತು ನಿನ್ನ ಸಾಲಗಳನ್ನು ತೀರಿಸುವನು. (ಸೈರುಸ್ಸಹಾಬ ಸಂಪುಟ-3, ಪುಟ-502, ದಾರುಲ್ ಇಶಾಅತ್ ಕರಾಚಿ) (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ-5, ಪುಟ-188, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-440,441, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ಮುಆಧ್‌ರೊಡನೆ(ರ) ಹೀಗೆಯೂ ಹೇಳಿದರು: ಹೇ ಮುಆಧ್, ನಿನಗೆ ತುಂಬ ಸಾಲಗಳಿವೆ. ಯಾರಾದರೂ ಕಾಣಿಕೆಯಾಗಿ ಏನಾದರೂ ಕೊಟ್ಟರೆ, ಅದನ್ನು ನೀನು ಸ್ವೀಕರಿಸು. ನಾನು ನಿನಗೆ ಅದರ ಅನುಮತಿಯನ್ನು ಕೊಡುತ್ತಿದ್ದೇನೆ. (ಸೈರುಸ್ಸಹಾಬ ಸಂಪುಟ-5, ಪುಟ-146, ದಾರುಲ್ ಇಶಾಅತ್ ಲಾಹೋರ್) ಹಝ್ರತ್ ಪೈಗಂಬರ್(ಸ) ಅವರಿಗೆ ಕೊಡುಗೆಗಳನ್ನು ಸ್ವೀಕರಿಸಲು ಅನುಮತಿ ಕೊಟ್ಟಿದ್ದರು. ಎಂದರೆ, ಕಾಣಿಕೆಯನ್ನು ಸ್ವೀಕರಿಸುವುದರಲ್ಲಿ ಅಡ್ಡಿಯೇನೂ ಇಲ್ಲ. ಇದರಿಂದ ಪ್ರೀತಿಯ ಸಂಬಂಧ ಸುದೃಢವಾಗುತ್ತದೆ. ಪರಸ್ಪರ ಕೊಡುಗೆಗಳನ್ನು ಕೊಡಬೇಕು. ಆದರೆ ಇಲ್ಲಿ ಅವರನ್ನು ಹಝ್ರತ್ ಪೈಗಂಬರರ(ಸ) ಪ್ರತಿನಿಧಿಯಾಗಿ ಕಳುಹಿಸಲಾಗಿತ್ತು. ಹೀಗೆ ಪ್ರತಿನಿಧಿಯಾಗಿ ಕಳುಹಿಸಲಾದ ಕಾರಣದಿಂದ ಜನರು ಕೊಡುಗೆಗಳನ್ನು ಕೊಟ್ಟರೆ, ಅವರಿಗೆ ಅದನ್ನು ಖರ್ಚುಮಾಡುವ ಅಧಿಕಾರವನ್ನು ಹಝ್ರತ್ ಪೈಗಂಬರ್(ಸ) ಕೊಟ್ಟಿದ್ದರು. ಸಾಮಾನ್ಯವಾಗಿ ಹೀಗೆ ಸಿಗುವ ಕೊಡುಗೆಗಳನ್ನು ಬೈತುಲ್‌ಮಾಲಿಗೆ ಅಥವಾ ಹಝ್ರತ್ ಪೈಗಂಬರರಿಗೆ(ಸ) ಒಪ್ಪಿಸಲಾಗುತ್ತಿತ್ತು.

ಹಝ್ರತ್ ಮುಆಧ್ ಬಿನ್ ಜಬಲ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಅವರನ್ನು ಯಮನ್ ಕಡೆಗೆ ಕಳುಹಿಸುವಾಗ, ಅವರಿಗೆ ಉಪದೇಶವನ್ನು ನೀಡಲಿಕ್ಕಾಗಿ ಅವರೊಂದಿಗೆ ಹೊರಗೆ ಬಂದರು. ಹಝ್ರತ್ ಮುಆಧ್(ರ) ಸವಾರಿಯಲ್ಲಿ ಕುಳಿತುಕೊಂಡಿದ್ದರು. ಹಝ್ರತ್ ಪೈಗಂಬರ್(ಸ) ಅವರ ಸವಾರಿಯೊಂದಿಗೆ ನಡೆದುಹೋಗುತ್ತಿದ್ದರು. ಹಝ್ರತ್ ಪೈಗಂಬರ್(ಸ) ಉಪದೇಶಗಳನ್ನು ನೀಡಿದ ನಂತರ ಹೀಗೆ ಹೇಳಿದರು: ಹೇ ಮುಆಧ್, ಮುಂದಿನ ವರ್ಷ ಬಹುಶಃ ನಿನ್ನ ಭೇಟಿ ನನ್ನೊಡನೆ ಆಗದೇ ಇರಬಹುದು. ಬಹುಶಃ ನೀನು ನನ್ನ ಮಸೀದಿ ಮತ್ತು ನನ್ನ ಗೋರಿಯ ಸಮೀಪದಿಂದ ದಾಟಿಹೋಗಲೂಬಹುದು. ಹಝ್ರತ್ ಪೈಗಂಬರರ(ಸ) ವಿಯೋಗದ ಬಗ್ಗೆ ಈ ಮಾತುಗಳನ್ನು ಕೇಳಿ ಹಝ್ರತ್ ಮುಆಧ್(ರ) ಜೋರಾಗಿ ಅಳಲು ತೊಡಗಿದರು. ಅನಂತರ ಹಝ್ರತ್ ಪೈಗಂಬರ್(ಸ) ತನ್ನ ದಿಕ್ಕನ್ನು ಬದಲಿಸಿದರು ಮತ್ತು ತನ್ನ ಅನುಗ್ರಹೀತ ಮುಖವನ್ನು ಮದೀನದ ಕಡೆಗೆ ತಿರುಗಿಸಿ ಹೇಳಿದರು: ದೇವಭಕ್ತರಾಗಿರುವವರು ನನ್ನ ಸಮೀಪವಾಗಿರುವರು. ಅವರು ಯಾರೇ ಆದರು ಸರಿ ಮತ್ತು ಅವರು ಎಲ್ಲಿಯೇ ಇರುವರಾದರೂ ಸರಿ. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-7, ಪುಟ-359, ಹದೀಸ್-22402, ಆಲಿಮುಲ್ ಕುತುಬ್ ಬೈರೂತ್ 1998)

ಈ ಸಂದರ್ಭದಲ್ಲಿ ಹಝ್ರತ್ ಮುಆಧ್‌ರೊಡನೆ(ರ) ಹೀಗೆ ಹೇಳಿದ್ದಾಗಿ ಒಂದು ವರದಿಯಲ್ಲಿದೆ: ನೀವು ಗ್ರಂಥಾನುಸಾರಿಗಳಾದ ಜನರ ಬಳಿಗೆ ಸಮೀಪ ಕಾಲದಲ್ಲಿ ಹೋಗುವಿ. ನೀವು ಅವರ ಬಳಿಗೆ ತಲುಪಿದರೆ, ಅಲ್ಲಾಹನಲ್ಲದೆ ಬೇರೆ ಆರಾಧ್ಯನಿಲ್ಲವೆಂದೂ ಹಝ್ರತ್ ಮುಹಮ್ಮದ್(ಸ) ಅಲ್ಲಾಹನ ದೂತರೆಂದೂ ಸಾಕ್ಷ್ಯವಹಿಸಲು ಅವರನ್ನು ಆಮಂತ್ರಿಸಿ. ಅವರು ನಿಮ್ಮ ಮಾತನ್ನು ಅಂಗೀಕರಿಸಿದರೆ, ಅಲ್ಲಾಹನು ಅವರ ಮೇಲೆ ಐದು ಹೊತ್ತಿನ ನಮಾಝ್‌ಗಳನ್ನು ನಿಶ್ಚಯಿಸಿರುವನು ಎಂಬುದನ್ನು ಹೇಳಿಕೊಡು. ಅವರು ನಿಮ್ಮ ಈ ಮಾತನ್ನು ಅಂಗೀಕರಿಸಿದರೆ, ಅವರ ಮೇಲೆ ಸದಖವನ್ನು ನಿಶ್ಚಯಗೊಳಿಸಿರುವನು ಹಾಗೂ ಅದು ಶ್ರೀಮಂತರಿಂದ ಪಡೆದುಕೊಂಡು ದರಿದ್ರರಿಗೆ ಕೊಡಲಾಗುವುದು ಎಂಬುದನ್ನು ಹೇಳುಕೊಡು. ಅವರು ನಿಮ್ಮ ಈ ವಾತನ್ನು ಸಹ ಅಂಗೀಕರಿಸಿದರೆ,ಕಿವಿಗೊಟ್ಟು ಕೇಳು, ಅವರ ಉತ್ತಮವಾದ ಸಂಪತ್ತಿನಿಂದ ಸದಖ ವಸೂಲು ಮಾಡಬೇಡ, ಬದಲಿಗೆ ಮಧ್ಯಮ ದರ್ಜೆಯ ಸಂಪತ್ತಿನಿಂದ ವಸೂಲು ಮಾಡು ಮತ್ತು ಪೀಡಿತನ ಮೊರೆಯಿಂದ ದೂರವಿರು. ಏಕೆಂದರೆ,

ದೌರ್ಜನ್ಯಪೀಡಿತನ ಮತ್ತು ಅಲ್ಲಾಹನ ನಡುವೆ ಯಾವುದೇ ತಡೆಯಿಲ್ಲ. ಪೀಡಿತನ ಕೂಗಿನಿಂದ ರಕ್ಷಣೆ ಪಡೆಯಲು ವಿಶೇಷವಾಗಿ ಉಪದೇಶಿಸಿದರು.
(ಸಹೀಹ್ ಬುಖಾರಿ ಕಿತಾಬುಲ್ ಮಗಾಝಿ, ಹದೀಸ್–4347)

ಏಕೆಂದರೆ, ಪೀಡಿತನ ಫಿರ್ಯಾದಿ ಮತ್ತು ಅಲ್ಲಾಹನ ಮಧ್ಯ ಯಾವುದೇ ಅಡಚಣೆಯಿರುವುದಿಲ್ಲ.

ಹಝ್ರ‌ತ್ ಮುಆಧ್ ಬಿನ್ ಜಬಲ್‌ರನ್ನು(ರ) ಹಝ್ರ‌ತ್ ಪೈಗಂಬರ್(ಸ) ಖ಼ಾಝ಼ಿಯೆಂಬ ನೆಲೆಯಲ್ಲಿ ಯಮನಗೆ ಕಳುಹಿಸಿದ್ದರು. ಅವರು ಅಲ್ಲಿಯ ಜನರಿಗೆ ಪವಿತ್ರ ಖುರ್‌ಆನ್ ಮತ್ತು ದೀನನ್ನು ಕಲಿಸುತ್ತಿದ್ದರು ಮತ್ತು ಅವರ ಮಧ್ಯೆ ತೀರ್ಮಾನಗಳನ್ನು ಮಾಡುತ್ತಿದ್ದರು. ಝಕಾತ್ ವಸೂಲು ಮಾಡುತ್ತಿದ್ದ ಯಮನಿನ ಕಾರ್ಯಕರ್ತರು ಅದನ್ನು ಒಟ್ಟುಗೂಡಿಸಿ ಹಝ್ರ‌ತ್ ಮುಆಧ್ ಬಿನ್ ಜಬಲ್‌ರಿಗೆ(ರ) ಕಳುಹಿಸುತ್ತಿದ್ದರು. ಹಝ್ರ‌ತ್ ಪೈಗಂಬರ್(ಸ) ಯಮನಿನ ಆಡಳಿತ ವ್ಯವಸ್ಥೆಯನ್ನು ಐದು ಸಹಾಬಿಯರಿಗೆ ವಿತರಿಸಿಕೊಟ್ಟಿದ್ದರು. ಅವರ ಹೆಸರುಗಳು ಹೀಗಿವೆ: ಹಝ್ರ‌ತ್ ಖ಼ಾಲಿದ್ ಬಿನ್ ಸಈದ್(ರ), ಹಝ್ರ‌ತ್ ಮುಹಾಜಿರ್ ಬಿನ್ ಉಮಯ್ಯ(ರ), ಹಝ್ರ‌ತ್ ಝೈದ್ ಬಿನ್ ಲಬೀದ್(ರ), ಹಝ್ರ‌ತ್ ಮುಆಧ್ ಬಿನ್ ಜಬಲ್(ರ) ಮತ್ತು ಹಝ್ರ‌ತ್ ಅಬೂ ಮೂಸಾ ಅಶ್‌ಅರಿ(ರ). (ಅಲ್‌ಇಸ್ತಿಯಾಬ್ ಸಂಪುಟ–3, ಪುಟ–460. ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2010)

ಆಡಳಿತವನ್ನು ಈ ಐವರಿಗೆ ವಹಿಸಿಕೊಡಲಾಗಿತ್ತು ಎಂದು ಒಂದು ವರದಿಯಲ್ಲಿ ಬಂದಿದೆ.

ಹಝ್ರ‌ತ್ ಮುಆಧ್ ಬಿನ್ ಜಬಲ್(ರ) ವರದಿ ಮಾಡುತ್ತಾರೆ: ಹಝ್ರ‌ತ್ ಪೈಗಂಬರ್(ಸ) ನನ್ನನ್ನು ಯಮನನ ಕಡೆಗೆ ಕಳುಹಿಸಿದಾಗ, ಪ್ರತಿ ಮೂವತ್ತು ದನಗಳ ಝಕಾತ್ ಆಗಿ ಒಂದು ವರ್ಷದ ಒಂದು ದನವನ್ನು ಮತ್ತು ಪ್ರತಿ ನಲ್ವತ್ತು ದನಗಳ ಝಕಾತ್ ಆಗಿ ಎರಡು ವರ್ಷದ ಒಂದು ದನವನ್ನು ವಸೂಲು ಮಾಡಲು ನಿರ್ದೇಶಿಸಿದರು. ಪ್ರತಿ ಪ್ರಾಯಪೂರ್ತಿಯಾದ ಪ್ರಬುದ್ಧ ವ್ಯಕ್ತಿಯಿಂದ ಒಂದು ದೀನಾರ್ ಅಥವಾ ಅಷ್ಟು ಬೆಲೆಯ ಮವಾಫಿರ ಪಡೆಯಲು ಹೇಳಿದರು. ಮವಾಫಿರ ಎಂಬುದು ಯಮನಿನ ಬಟ್ಟೆಯಾಗಿದೆ. ಮವಾಫಿರ ಒಂದು ಗೋತ್ರದ ಹೆಸರಾಗಿತ್ತು. ಅವರು ಈ ಬಟ್ಟೆಯನ್ನು ತಯಾರು ಮಾಡುತ್ತಿದ್ದರು. ಅದರ ಹೆಸರಿನಿಂದ ಈ ಬಟ್ಟೆ ಪ್ರಸಿದ್ಧವಾಗಿತ್ತು. ಇದು ಮುಸ್ನದ್ ಅಹ್ಮದ್ ಬಿನ್ ಹಂಬಲಿನ ವರದಿಯಾಗಿದೆ. (ಮುಸ್ನದ್ ಸಹ್ಮದ್ ಬಿನ್ ಹಂಬಲ್ ಸಂಪುಟ–7, ಪುಟ–348, ಹದೀಸ್–22363, ಆಲಿಮುಲ್ ಕುತುಬ್ ಬೈರೂತ್ 1998)

ಅಲ್ಲಾಮ ಇಸ್ಹಾಖ್ ಹೇಳುತ್ತಾರೆ: ಹಝ್ರ‌ತ್ ಮುಆಧ್ ಬಿನ್ ಜಬಲ್‌ರ(ರ) ಕಾಲಲ್ಲಿ ಕುಂಟತೆಯಿತ್ತು. ಅವರು ಯಮನಿಗೆ ಹೋದಾಗ, ಜನರ ಇಮಾಮತ್ ವಹಿಸಿದರು. ನಮಾಝಿನಲ್ಲಿ ತನ್ನ ಕಾಲನ್ನು ಮುಂದಿನ ಕಡೆಗೆ ಅಥವಾ ಬಲಗಡೆಗೆ ಹರಡಿದ್ದರು. ಹಿಂದೆ ನಮಾಝ್ ಮಾಡುತ್ತಿದ್ದ ಜನರು ಸಹ ಅದೇ ರೀತಿಯಲ್ಲಿ ತಮ್ಮ ಕಾಲುಗಳನ್ನು ಹರಡಿದರು. ನಮಾಝ್ ಮುಗಿಸಿದ ನಂತರಹಝ್ರ‌ತ್ ಮುಆಧ್(ರ) ಹೇಳಿದರು: ನಾನು ಮಾಡಿದಂತೆ ನೀವು ಮಾಡಿದ್ದು ಒಳ್ಳೆಯದೇ ಆಯಿತು. ಆದರೆ ಇನ್ನು ಮುಂದೆ ಹೀಗೆ ಮಾಡಬೇಡಿರಿ. ಏಕೆಂದರೆ, ನನಗೆ ತೊಂದರೆಯಿದ್ದ ಕಾರಣದಿಂದ ನಾನು ನನ್ನ ಕಾಲನ್ನು ಹರಡಿದ್ದೆ. ಎಂದರೆ, ನನ್ನನ್ನು ನೋಡಿ ನೀವು ಅನುಸರಣೆಯ ಮಾದರಿಯನ್ನು ತೋರಿಸಿದ್ದು ಎಲ್ಲ ರೀತಿಯಲ್ಲೂ ಶ್ಲಾಘನೀಯವೇ ಆಗಿದೆ. ಅನುಸರಣೆ ಹೀಗೆಯೇ ಆಗಬೇಕು. ಹಿಂದೆ ನಿಂತುಕೊಂಡು ಪೂರ್ಣವಾಗಿ ಇಮಾಮನ್ನು ಅನುಸರಿಸಬೇಕು. ಆದರೆ ಇದು ನನ್ನ ನಿರ್ಬಂಧಾವಸ್ಥೆಯಾಗಿತ್ತು. ಪ್ರವಾದಿಚರ್ಯೆಯಲ್ಲ. ನಿರ್ಬಂಧಾವಸ್ಥೆಯಿಲ್ಲದವರು ಆಜ್ಞಾಪಿಸಲಾದ ರೀತಿಯಲ್ಲಿ, ಸುನ್ನತ್ ಪ್ರಕಾರ, ಹಝ್ರ‌ತ್ ಪೈಗಂಬರರು(ಸ) ಮಾಡಿತೋರಿಸಿದ ರೀತಿಯಲ್ಲಿ ನಮಾಝ್ ಮಾಡಬೇಕು. (ಸೈರುಸ್ಸಹಾಬ ಸಂಪುಟ–3, ಪುಟ–505, ದಾರುಲ್ ಇಶಾಅತ್ ಕರಾಚಿ) (ಅಲ್‌ಇಸ್ತಿಯಾಬ್ ಸಂಪುಟ–3, ಪುಟ–1404, ದಾರುಲ್ ಜೀಲ್ ಬೈರೂತ್ 1992)

ಹಝ್ರ‌ತ್ ಮುಆಧ್(ರ) ಯಮನಿನಲ್ಲಿ ಬೈತುಲ್‌ಮಾಲಿನ ಹಣದಿಂದ ವ್ಯಾಪಾರ ಮಾಡಿದರು. ಅದರಿಂದ ಲಭಿಸಿದ ಲಾಭದಿಂದ ತನ್ನ ಸಾಲಗಳನ್ನು ತೀರಿಸಿದರು. ಅಲ್ಲಾಹನ ಸಂಪತ್ತಿನಿಂದ, ಎಂದರೆ ಬೈತುಲ್ ಮಾಲಿನ ಹಣದಿಂದ ವ್ಯಾಪಾರ ಮಾಡಿದ ಮೊದಲ ವ್ಯಕ್ತಿ ಹಝ್ರ‌ತ್ ಮುಆದ್(ರ) ಆಗಿದ್ದರು. ಹಝ್ರ‌ತ್ ಪೈಗಂಬರರ(ಸ) ಅನುಮತಿಯಿಂದ ಕೊಡುಗೆಗಳನ್ನು ಸಹ ಸ್ವೀಕರಿಸುತ್ತಿದ್ದರು. ಎಲ್ಲಿಯವರೆಗೆ ಎಂದರೆ, ಅವರ ಬಳಿ ಮೂವತ್ತು ಕುರಿ ಮತ್ತು ಆಡುಗಳು ಇದ್ದುವು. ಅವರಿಗೆ ಹಝ್ರ‌ತ್ ಪೈಗಂಬರ್(ಸ) ಸಾಲಗಳನ್ನು ತೀರಿಸಲು ಈ ಅನುಮತಿಯನ್ನು ಕೊಟ್ಟಿದ್ದರು. ವ್ಯಾಪಾರದಿಂದ ಅವರಿಗೆ ಲಭಿಸುತ್ತಿದ್ದ ಲಾಭದಿಂದ ಅವರು ತಮ್ಮ ಸಾಲಗಳನ್ನು ತೀರಿಸುತ್ತಿದ್ದರು. ಅದರಿಂದ ತಮ್ಮ ಕೆಲಸದ, ಪರಿಶ್ರಮದ ಮತ್ತು ಸಲಹೆಗಳ ಕೂಲಿಯನ್ನು ಸಹ ಪಡೆಯುತ್ತಿದ್ದರು. ಹೀಗೆ ಮೊತ್ತ ಲಾಭದಿಂದ ಕೂಲಿ ಮತ್ತು ತನ್ನ ಲಾಭವನ್ನು ಪಡೆಯುತ್ತಿದ್ದರು. ಹೇಗಿದ್ದರೂ ಇದೆಲ್ಲ ಹಝ್ರ‌ತ್ ಪೈಗಂಬರರ(ಸ) ಅನುಮತಿಯಿಂದ ಮಾಡುತ್ತಿದ್ದರು.

ಹಝ್ರ‌ತ್ ಪೈಗಂಬರರ(ಸ) ನಿಧನದ ನಂತರ ಹಝ್ರ‌ತ್ ಮುಆಧ್(ರ) ಹಜ್ಜ್ ಮಾಡಲು ಬಂದರು. ಅವರು ಹಝ್ರ‌ತ್ ಉಮರರನ್ನು(ರ) ಭೇಟಿಯಾದರು. ಹಝ್ರ‌ತ್ ಉಮರ್‌ರನ್ನು(ರ) ಹಝ್ರ‌ತ್ ಅಬೂಬಕ್ಕರ್(ರ) ಹಜ್ಜ್ ವೇಳೆಯಲ್ಲಿ ಝಕಾತ್ ವಸೂಲು ಮಾಡಲು ಕಳುಹಿಸಿದ್ದರು. ಹೀಗೆ ಹಝ್ರ‌ತ್ ಉಮರ್(ರ) ಮತ್ತು ಹಝ್ರ‌ತ್ ಮುಆಧ್(ರ) ತರ್‌ವಿಯಾದ ದಿನದಂದು ಭೇಟಿಯಾದರು. ಇಬ್ಬರು ಪರಸ್ಪರ ಆಲಂಗಿಸಿದರು ಮತ್ತು ಹಝ್ರ‌ತ್ ಪೈಗಂಬರರ(ಸ) ನಿಧನದ ಶೋಕವನ್ನು ವ್ಯಕ್ತಪಡಿಸಿದರು. ಅನಂತರ ಇಬ್ಬರೂ ನೆಲದಲ್ಲಿ ಕುಳಿತುಕೊಂಡು ಮಾತನಾಡಲು ಶುರುಮಾಡಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–441, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಇತಿಹಾಸದ ಗ್ರಂಥವಾದ ಅಲ್‌ಇಸ್ತೀಆಬಿನಲ್ಲಿ ಹೀಗೆ ಬರೆಯಲಾಗಿದೆ: ಹಝ್ರ‌ತ್ ಮುಆಧ್(ರ) ತುಂಬ ಉದಾರಿಯಾಗಿದ್ದರು. ಈ ದಾನಶೀಲತೆ ಮತ್ತು ಉದಾರತೆಯ ಕಾರಣದಿಂದ ಅವರ ಎಲ್ಲ ಸಂಪತ್ತು ಮುಗಿದು ಸಾಲಗಾರರಾದರು. ಅವರು ಹಝ್ರ‌ತ್ ಪೈಗಂಬರರ(ಸ) ಸನ್ನಿಧಿಗೆ ಬಂದು ಹೀಗೆ ಹೇಳಿದರು: ಸಾಲಕೊಟ್ಟವರೊಡನೆ ನನ್ನ ಸಾಲಗಳನ್ನು ಮನ್ನಾ ಮಾಡಲು ಹೇಳಿರಿ. ಆಗ ಹಝ್ರ‌ತ್ ಪೈಗಂಬರ್(ಸ) ಸಾಲಕೊಟ್ಟವರೊಡನೆ ಸಾಲ ಮನ್ನಾ ಮಾಡಲು ಹೇಳಿದರು. ಆದರೆ ಅವರು ಸಾಲಗಳನ್ನು ಮನ್ನಾ ಮಾಡಲು ತಯಾರಾಗಲಿಲ್ಲ. ಕೆಲವರು ಹಝ್ರ‌ತ್ ಪೈಗಂಬರರ(ಸ) ಸಲುವಾಗಿ ಹಝ್ರ‌ತ್ ಮುಆಧ್ ಕೊಡಬೇಕಾದ ಸಾಲಗಳನ್ನು ಮನ್ನಾ ಮಾಡುತ್ತಿದ್ದರು. ಹಝ್ರ‌ತ್ ಪೈಗಂಬರರ(ಸ) ಸ್ಥಾನ ಅತ್ಯುನ್ನತವಾಗಿತ್ತು. ಅವರ ಪರವಾಗಿ ಮಾತ್ರ ಯಾರಾದರೂ ಸಾಲಗಳನ್ನು ಮನ್ನಾ ಮಾಡಬಹುದಾಗಿತ್ತು ಅಥವಾ ಧನತ್ಯಾಗ ಮಾಡಬಹುದಾಗಿತ್ತು. ಹೇಗಿದ್ದರು ಕೆಲವರು ಮನ್ನಾ ಮಾಡಲು ತಯಾರಾಗಿರಲಿಲ್ಲ. ಆಗ ಹಝ್ರ‌ತ್ ಪೈಗಂಬರ್(ಸ) ಸಾಲಗಳನ್ನು ತೀರಿಸಲು ಹಝ್ರ‌ತ್ ಮುಆಧ್‌ರ(ರ) ಸೊತ್ತುಗಳನ್ನೆಲ್ಲ ಮಾರಾಟ ಮಾಡಿಸಿದರು. ಹೀಗೆ ಹಝ್ರ‌ತ್ ಮುಆಧ್‌ರ(ರ) ಕೈಯಲ್ಲಿ ಏನೂ ಇಲ್ಲದಂತಾಯಿತು. ಮಕ್ಕಾ ವಿಜಯದ ನಂತರ ಹಝ್ರ‌ತ್ ಪೈಗಂಬರ್(ಸ) ಹಝ್ರ‌ತ್ ಮುಆಧ್‌ರನ್ನು(ರ) ಯಮನಿನ ಒಂದು ಭಾಗದ ಅಮೀರನ್ನಾಗಿ ಮಾಡಿ ಕಳುಹಿಸಿದರು. ಅಮೀರ್ ಆಗಿ ಕಳುಹಿಸಲಾಗಿತ್ತು ಎಂದು ಈ ವರದಿಯಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ಅವರಿಗೆ ಸಿಗುವ ಕಾಣಿಕೆಗಳನ್ನು ಬೈತುಲ್‌ಮಾಲಿನದ್ದಾಗಿ ಭಾವಿಸಲಾಗುತ್ತಿತ್ತು. ಅಲ್ಲಾಹನ ಸಂಪತ್ತಿನಿಂದ, ಎಂದರೆ ಬೈತುಲ್‌ಮಾಲಿನ ಹಣದಿಂದ ವ್ಯಾಪಾರ ಮಾಡಿದ ಮೊದಲ ವ್ಯಕ್ತಿ ಹಝ್ರ‌ತ್ ಮುಆಧ್(ರ) ಆಗಿದ್ದರು. ಅವರು ಯಮನ್‌ನಲ್ಲಿ ಇರುವಾಗಲೇ ಹಝ್ರ‌ತ್ ಪೈಗಂಬರ್(ಸ) ನಿಧನರಾದರು. ಈ ಕಾಲಾವಧಿಯಲ್ಲಿ ವ್ಯಾಪಾರದಿಂದ ಅವರಿಗೆ ಲಾಭ ಸಿಗುತ್ತಿತ್ತು. ಅವರು ಅದರಿಂದ ಪಡೆಯುತ್ತಿದ್ದ ತನ್ನ ಭಾಗದಿಂದ ಅವರು ಸಂಪನ್ನರಾದರು. ಅನಂತರ ಅವರು ವಾಪಾಸ್ಸು ಬಂದಾಗ, ಹಝ್ರ‌ತ್ ಉಮರ್(ರ) ಹಝ್ರ‌ತ್ ಅಬೂಬಕ್ಕರ್‌ರೊಡನೆ ಹೇಳಿದರು: ಹಝ್ರ‌ತ್ ಮುಆಧ್‌ರನ್ನು(ರ) ಕರೆಯಿರಿ ಮತ್ತು ಅವರಿಗೆ ಆವಶ್ಯವಾದದನ್ನು ಬಿಟ್ಟು ಬಾಕಿಯನ್ನು ವಸೂಲು ಮಾಡಿರಿ. ಹಝ್ರ‌ತ್ ಪೈಗಂಬರ್(ಸ) ಸಾಲಗಳನ್ನು ತೀರಿಸಲು ಅನುಮತಿ ಕೊಟ್ಟಿದ್ದರು. ಸಾಲಗಳನ್ನು ತೀರಿಸಲಾಯಿತು ಮತ್ತು ಒಬ್ಬ ಮನುಷ್ಯನಿಗೆ ಆವಶ್ಯವಾದ ವಸ್ತುಗಳು ಸಹ ಇರಬೇಕು. ಆದರೆ ಹಝ್ರ‌ತ್ ಉಮರರ(ರ) ಯೋಚನೆ ಪ್ರಕಾರ ಈಗ ಅವರಿಗೆ ಸಿಕ್ಕಿರುವ ಸುಖಜೀವಿತ ಅದು ಆಗಬಾರದಿತ್ತು. ಆದ್ದರಿಂದ ಆವಶ್ಯವಿದ್ದ ವಸ್ತುಗಳನ್ನು ಬಿಟ್ಟು ಬಾಕಿಯನ್ನು ವಸೂಲು ಮಾಡಲು ಹೇಳಿದರು. ಹಝ್ರ‌ತ್ ಅಬೂಬಕ್ಕರರ(ರ) ಮುಂದೆ ಈ ವಿಷಯ ಬಂತು. ಹಝ್ರ‌ತ್ ಅಬೂಬಕ್ಕರಿಗೆ(ರ) ಹಝ್ರ‌ತ್ ಪೈಗಂಬರರೊಂದಿಗೆ(ಸ) ಪ್ರೇಮವಿತ್ತು. ಹಝ್ರ‌ತ್ ಪೈಗಂಬರ್(ಸ) ಅನುಮತಿಕೊಟ್ಟ ಒಂದು ಸಂಗತಿಯ ವಿರುದ್ಧ ತನ್ನ ತೀರ್ಮಾನವನ್ನು ಮಾಡುವುದು ಹಝ್ರ‌ತ್ ಅಬೂಬಕ್ಕರ್‌ರಿಗೆ(ರ) ಸಹಿಸಲು ಸಾಧ್ಯವಿರಲಿಲ್ಲ. ಹೇಗಿದ್ದರೂ ಹಝ್ರ‌ತ್ ಅಬೂಬಕ್ಕರ್(ರ) ಹೇಳಿದರು: ಮುಆಧ್‌ರನ್ನು(ರ) ಹಝ್ರ‌ತ್ ಪೈಗಂಬರ್(ಸ) ಯಮನಿಗೆ ಕಳುಹಿಸಿದ್ದರು ಮತ್ತು ನಾನು ಅವರಿಂದ ಏನೂ ವಾಪಾಸ್ಸು ಪಡೆಯುದಿಲ್ಲ. ಬೈತುಲ್‌ಮಾಲಿನ ಸಂಪತ್ತಿನಿಂದ ವ್ಯಾಪಾರ ಮಾಡಬಹುದೆಂದೂ ಅದರಿಂದ ಸ್ವಲ್ಪ ಭಾಗವನ್ನು ಪಡೆಯಬಹುದೆಂದೂ ಹೇಳಿ ಅವರನ್ನು ಹಝ್ರ‌ತ್ ಪೈಗಂಬರ್(ಸ) ಕಳುಹಿಸಿದ್ದರು. ಅವರು ಹಝ್ರ‌ತ್ ಪೈಗಂಬರರ(ಸ) ನಿರ್ದೇಶನದಂತೆ ಹೋಗಿದ್ದರು ಮತ್ತು ಅವರ ಅನುಮತಿಯಿಂದ ಕಾಣಿಕೆಗಳನ್ನು ಮತ್ತು ಇತರ ವಸ್ತುಗಳನ್ನು ಪಡೆಯುತ್ತಿದ್ದರು. ಆದ್ದರಿಂದ ಅವರು ಸ್ವತಃ ಮರಳಿ ಕೊಡುವುದರ ಹೊರತು ನಾನು ಅವರೊಡನೆ ಏನನ್ನೂ ವಾಪಾಸ್ಸು ಕೊಡಲು ಹೇಳುವುದಿಲ್ಲ. ಹಝ್ರ‌ತ್ ಉಮರ್(ರ) ಸಹ ಕೆಲವು ಕಾಯ್ದೆ ಕಾನೂನು ವಿಷಯದಲ್ಲಿ ಕಟ್ಟುನಿಟ್ಟಾಗಿದ್ದರು. ಅವರು ಹಝ್ರ‌ತ್ ಮುಆಧ್‌ರ(ರ) ಬಳಿಗೆ ಹೋದರು.

ಹಝ್ರತ್ ಮುಆಧ್‌ರೊಡನೆ(ರ) ಇದರ ಬಗ್ಗೆ ಹೇಳಿದರು. ಹಝ್ರತ್ ಮುಆಧ್(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ನನ್ನನ್ನು ಯಮನ್ನಿನ ಕಡೆಗೆ ಕಳುಹಿಸಿದ್ದು ನನ್ನ ಆವಶ್ಯಕತೆಗಳನ್ನು ಪೂರೈಸಲಿಕ್ಕಾಗಿದೆ. ಆದ್ದರಿಂದ ನಾನು ಏನನ್ನೂ ಕೊಡುವುದಿಲ್ಲ. ಅವರಿಗೆ ಸುಖವಾದ ಜೀವಿತ ಕೆಲವು ದಿನಗಳಿಗೆ ಮಾತ್ರವಿರುತ್ತಿತ್ತು ಎಂದು ವರದಿಗಳಿಂದ ಮತ್ತು ಅವರ ಸಂಪೂರ್ಣ ಜೀವಿತಮಾದರಿಯಿಂದ ಸಾಬೀತಾಗುತ್ತದೆ.ಏಕೆಂದರೆ, ಹೆಚ್ಚಾಗಿ ಅವರು ಜನರೆಡೆಯಲ್ಲಿ ಅದನ್ನು ವಿತರಿಸುತ್ತಿದ್ದರು.ಅವರು ಹೇಗೆ ಅವುಗಳನ್ನು ವಿತರಿಸುತ್ತಿದ್ದರು ಎಂದು ನಾನು ಮುಂದೆ ಹೇಳುವ ವರದಿಗಳಿಂದ ತಿಳಿದುಬರುವುದು.ಅನಂತರ ಹಝ್ರತ್ ಮುಆಧ್(ರ) ಹಝ್ರತ್ ಉಮರರ ಬಳಿಗೆ ಹೋಗಿ ಹೇಳಿದರು: ನಾನು ನಿಮ್ಮ ಮಾತನ್ನು ಸಮ್ಮತಿಸುತ್ತೇನೆ. ಮೊದಲು ಏನೂ ಕೊಡುವುದಿಲ್ಲವೆಂದು ಜವಾಬುಕೊಟ್ಟಿದ್ದರು. ಆದರೆ ಸ್ವಲ್ಪ ಕಾಲದ ನಂತರ ಅವರು ಹಝ್ರತ್ ಉಮರರ(ರ) ಬಳಿಗೆ ಹೋಗಿ ಹೇಳಿದರು: ಸರಿ, ನಾನು ನಿಮ್ಮ ಮಾತನ್ನು ಸಮ್ಮತಿಸುತ್ತೇನೆ. ನೀವು ಹೇಳಿದಂತೆ ನಾನು ಮಾಡುತ್ತೇನೆ. ಏಕೆಂದರೆ, ನಾನು ಕನಸಿನಲ್ಲಿ ನಾನು ನೀರಿನಲ್ಲಿ ಮುಳುಗುತ್ತಿರುವುದಾಗಿ ಮತ್ತು ನೀವು ಎಂದರೆ, ಹಝ್ರತ್ ಉಮರ್(ರ) ನನ್ನನ್ನು ಬಚಾವು ಮಾಡುತ್ತಿರುವುದಾಗಿ ನಾನು ಕಂಡೆನು. ಅನಂತರ ಹಝ್ರತ್ ಮುಆಧ್(ರ) ಹಝ್ರತ್ ಅಬೂಬಕ್ಕರರ(ರ) ಸನ್ನಿಧಿಗೆ ಬಂದರು. ಎಲ್ಲ ಸಂಗತಿಗಳನ್ನು ಅವರೊಡನೆ ಹೇಳಿದರು ಮತ್ತು ಅಲ್ಲಾಹನ ಮೇಲೆ ಆಣೆ ಹಾಕಿ ಹೀಗೆ ಹೇಳಿದರು: ನಾನು ನಿಮ್ಮಿಂದ ಯಾವುದೇ ಸಂಗತಿಯನ್ನು ರಹಸ್ಯವಾಗಿ ಇಡುವುದಿಲ್ಲ. ನಾನು ತೆಗೆದದ್ದು, ಯಾವ ರೀತಿಯಲ್ಲಿ ತೆಗೆದದ್ದು ಎಲ್ಲವೂ ನನ್ನ ಮುಂದಿದೆ. ಹಝ್ರತ್ ಅಬೂಬಕ್ಕರ್(ರ) ಹೇಳಿದರು: ನಾನು ನಿಮ್ಮಿಂದ ಏನನ್ನೂ ಮರಳಿ ಪಡೆಯುವುದಿಲ್ಲ. ಸರಿ ನೀವು ನಿಮ್ಮ ಎಲ್ಲವನ್ನು ಹೇಳಿದ್ದೀರಿ. ಎಲ್ಲದರ ಲೆಕ್ಕವನ್ನು ಕೊಟ್ಟಿದ್ದೀರಿ. ಆದರೆ ನಾನು ಏನನ್ನೂ ಪಡೆಯುವುದಿಲ್ಲ. ನಾನು ನಿಮಗೆ ಅವೆಲ್ಲವನ್ನು ಕಾಣಿಕೆಯಾಗಿ ಕೊಟ್ಟಿದ್ದೇನೆ. (ಅಲ್‌ಇಸ್ತಿಆಬ್ ಸಂಪುಟ–3, ಪುಟ–461, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2010)

ಹಝ್ರತ್ ಉಮರ್(ರ) ಸಹ ಅಲ್ಲೇ ಇದ್ದರು. ಹಝ್ರತ್ ಉಮರ್(ರ) ಹೇಳಿದರು: ಇದು ಅತ್ಯುತ್ತಮವಾದ ತೀರ್ಪಾಗಿದೆ. ಏಕೆಂದರೆ ಅದು ಖಲೀಫರ ತೀರ್ಮಾನವಾಗಿತ್ತು. ಎಲ್ಲವನ್ನು ಹಝ್ರತ್ ಅಬೂಬಕ್ಕರ್(ರ) ಸ್ವತಃ ಹಝ್ರತ್ ಮುಆಧ್‌ರಿಗೆ(ರ)ಕೊಡುತ್ತಿದ್ದಾರೆ. ಆದ್ದರಿಂದ ಇದು ಸರಿಯೆಂದು ಹೇಳಿ ಪರಿಪೂರ್ಣವಾದ ಅನುಸರಣೆಯಿಂದ ಈ ತೀರ್ಮಾನವನ್ನು ಹಝ್ರತ್ ಉಮರ್(ರ) ಅಂಗೀಕರಿಸಿದರು. ಹಝ್ರತ್ ಮುಆಧ್(ರ) ಏಕೆ ಸಂಪತ್ತನ್ನು ಉಪಯೋಗಿಸುತ್ತಿದ್ದಾರೆ ಎಂಬುದರ ಬಗ್ಗೆ ಹಝ್ರತ್ ಉಮರ್‌ರಿಗೆ(ರ) ಚಿಂತೆಯಿರಲಿಲ್ಲ. ಬದಲಿಗೆ ಹಝ್ರತ್ ಪೈಗಂಬರರ(ಸ) ನಿಧನದ ನಂತರ, ಇನ್ನು ಮುಂದೆ ವ್ಯಾಪಾರದಿಂದ ಲಭಿಸಿದ ಲಾಭವನ್ನು ಹಝ್ರತ್ ಮುಆಧ್(ರ) ಖರ್ಚು ಮಾಡಬೇಕೇ ಬೇಡವೇ, ಸಂಪತ್ತನ್ನು ತನ್ನ ಬಳಿ ಇರಿಸಬೇಕೇ ಬೇಡವೇ ಎಂಬುದರ ಬಗ್ಗೆ ಖಲೀಫರು ತೀರ್ಮಾನ ಮಾಡಬೇಕು ಎಂಬುವುದಾಗಿತ್ತು ಅವರ ನಿಲುವು. ಮೊದಲು ಮರಳಿ ಪಡೆಯಬೇಕೆಂದು ಒತ್ತಾಯದಿಂದ ಹಝ್ರತ್ ಉಮರ್(ರ) ಹೇಳುತ್ತಿದ್ದರು. ಆದರೆ ವಸೂಲು ಮಾಡುವುದಿಲ್ಲ, ಕೊಡುಗೆಯಾಗಿ ಕೊಡುತ್ತಿದ್ದೇನೆ ಎಂದು ಹಝ್ರತ್ ಅಬೂಬಕ್ಕರ್(ರ) ಹೇಳಿದ್ದಾಗ, ಹಝ್ರತ್ ಉಮರರ(ರ) ಬಳಿ ಅದನ್ನು ತಡೆಯಲು ಯಾವುದೇ ಕಾರಣವಿದ್ದಿರಲಿಲ್ಲ. ಮೌನವಾಗಿ ಸಮ್ಮತಿಸಿಕೊಂಡು ಈ ಎಲ್ಲದರ ಬಗ್ಗೆ ಇದು ಸರಿಯಾದ ಮತ್ತು ಅತ್ಯುತ್ತಮ ತೀರ್ಮಾನವೆಂದು ಹೇಳಿದರು. ಇದರಿಂದ ಸ್ಪಷ್ಟವಾಗುವಾಗ ಇನ್ನೊಂದು ಸಂಗತಿಯೆಂದರೆ, ಹಝ್ರತ್ ಮುಆಧ್‌ರ(ರ) ಆವಶ್ಯಕತೆಗಳು ಈಡೇರುವ ವರೆಗೆ ಅಲ್ಲಾಹನು ಸಹ ಇದರ ಕಡೆಗೆ ಹಝ್ರತ್ ಮುಆಧ್‌ರ(ರ) ಗಮನವನ್ನು ಹರಿಸಲಿಲ್ಲ. ಆದರೆ, ಹಝ್ರತ್ ಪೈಗಂಬರ್(ಸ) ನಿಧನರಾದ ನಂತರ, ಅವರ ಆವಶ್ಯಕತೆಗಳು ಪೂರೈಸಲ್ಪಟ್ಟ ನಂತರ, ಸಾಲಗಳೆಲ್ಲ ಪಾವತಿಯಾದ ಕಾರಣ ಆರಾಮ ಜೀವಿತ ಉಂಟಾದ ನಂತರ, ಅಲ್ಲಾಹನೇ ಸ್ವತಃ ಕನಸಿನ ಮೂಲಕ ಹಝ್ರತ್ ಮುಆಧ್‌ರ(ರ) ಗಮನವನ್ನು ಇದರ ಕಡೆಗೆ ಹರಿಸಿದರು. ಈಗ ಇರುವ ಸೊತ್ತಿನಲ್ಲೇ ಆವಶ್ಯಕತೆಗಳನ್ನು ಪೂರೈಸುವುದರ ಕಡೆಗೆ ಗಮನಹರಿಸಲಾಯಿತು. ಇನ್ನು ಮುಂದೆ ಅಮೀರ್ ಎಂಬ ನೆಲೆಯಲ್ಲಿ ಕಾಣಿಕೆಗಳನ್ನು ಪಡೆಯಲೂ ಬಾರದು, ಬೈತುಲ್ ಮಾಲಿನಿಂದ ಖರ್ಚು ಸಹ ಮಾಡಬಾರದೆಂದು ತಿಳಿಸಿಕೊಡಲಾಯಿತು. ಹೇಗಿದ್ದರೂ ಇದರ ನಂತರ ಅವರು ಹೆಚ್ಚು ಕಾಲ ಜೀವಿಸಿಯೂ ಇರಲಿಲ್ಲ. ಇದಾಗಿದೆ ಇದರ ಬಗ್ಗೆ ಸಂಕ್ಷಿಪ್ತವಾದ ವಿವರಣೆ.

ಹಝ್ರತ್ ಮುಆಧ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಅವರನ್ನು ಯಮನನ ಕಡೆಗೆ ಕಳುಹಿಸಿದಾಗ ಕೇಳಿದರು: ನಿನ್ನ ಮುಂದೆ ಏನಾದರೂ ವಿಷಯ ಬಂದರೆ, ನೀನು ಹೇಗೆ ತೀರ್ಮಾನವನ್ನು ಮಾಡುವೆ? ನಾನು ಹೇಳಿದೆ: ಅಲ್ಲಾಹನ ಗ್ರಂಥದಿಂದ ತೀರ್ಮಾನ ಮಾಡುವೆನು. ಹಝ್ರತ್ ಪೈಗಂಬರ್(ಸ) ಕೇಳಿದರು: ಅಲ್ಲಾಹನ ಗ್ರಂಥದಲ್ಲಿ ಇದರ ಬಗ್ಗೆ ಯಾವುದೇ ಆಜ್ಞೆಯಿಲ್ಲದಿದ್ದರೆ ಏನೂ ಮಾಡುತ್ತಿಯಾ? ನಾನು ಹೇಳಿದೆ: ಹಾಗಾದರೆ ನಾನು ಅಲ್ಲಾಹನ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುನ್ನತ್ ಪ್ರಕಾರ ತೀರ್ಮಾನ ಮಾಡುವೆನು. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನ ರಸೂಲಿನ ಸುನ್ನತಿನಲ್ಲೂ ಇದರ ಬಗ್ಗೆ ಯಾವುದೇ ಪರಿಹಾರವಿಲ್ಲದಿದ್ದರೆ ಏನು ಮಾಡುತ್ತಿಯಾ? ನಾನು ಹೇಳಿದೆ: ಹಾಗಾದರೆ, ಚೆನ್ನಾಗಿ ಆಲೋಚಿಸಿ ನನ್ನ ಅಭಿಪ್ರಾಯವನ್ನು ಹೇಳುವೆನು. ಅದರಲ್ಲಿ ಯಾವುದೇ ರೀತಿಯ ದೋಷವನ್ನು ಮಾಡುವನಲ್ಲ. ಆಗ ಹಝ್ರತ್ ಪೈಗಂಬರ್(ಸ) ನನ್ನ ಎದೆಯ ಮೇಲೆ ಕೈಯಿಟ್ಟುಕೊಂಡು ಹೇಳಿದರು: ಅಲ್ಲಾಹನ ರಸೂಲಿನ ದೂತನಿಗೆ ಇಂತಹ ಸಂಗತಿಗಳ ಅರಿವಿನ ಸೌಭಾಗ್ಯವನ್ನು ನೀಡಿರುವ ಅಲ್ಲಾಹನಿಗೆಲ್ಲ ಸ್ತುತಿಗಳು. ಇದು ಅಲ್ಲಾಹನ ರಸೂಲಿನ ಸಂಪ್ರೀತಿಗೆ ಕಾರಣವಾಗಿದೆ. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–347, ಹದೀಸ್–22357, ಆಲಿಮುಲ್ ಕುತುಬ್ ಬೈರೂತ್ 1998)

ಹಝ್ರತ್ ಮುಆಧ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಅವರನ್ನು ಯಮನಿಗೆ ಕಳುಹಿಸದಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: ಶ್ರೀಮಂತಿಕೆ ಮತ್ತು ಆಡಂಬರದ ಜೀವನವನ್ನು ನಡೆಸುವುದರಿಂದ ದೂರವಿರು. ಏಕೆಂದರೆ, ಅಲ್ಲಾಹನ ದಾಸರು ಆಡಂಬರದ ಜೀವಿತವನ್ನು ಕೈಗೊಳ್ಳುವುದಿಲ್ಲ. (ಮುಸ್ನದ್ ಅಹ್ಮದ್ ಬಿನ್ ಹಂಬಲ್ ಸಂಪುಟ–7, ಪುಟ–375, ಹದೀಸ್–22456, ಆಲಿಮುಲ್ ಕುತುಬ್ ಬೈರೂತ್ 1998)

ಇದರಿಂದ ಈ ಸಂಗತಿಯ ಬಗ್ಗೆ ಇನ್ನು ಹೆಚ್ಚು ಸ್ಪಷ್ಟವಾಗಿ ತಿಳಿದುಬರುತ್ತದೆ. ಅವರಿಗೆ ಕಾಣಿಕೆಯಾಗಿ ಸಿಗುವ ವಸ್ತುಗಳು ಮತ್ತು ವ್ಯಾಪಾರದಿಂದ ಸಿಗುವ ಲಾಭಗಳು ಸಾಲಗಳನ್ನು ಮರುಪಾವತಿಸಲು ಮತ್ತು ಆವಶ್ಯಕತೆಗಳನ್ನು ಪೂರೈಸಲು ಉಪಯೋಗಿಸುತ್ತಿದ್ದರು. ಅವರದ್ದು ತೆರೆದ ಕೈಯೆಂದೂ ಬಡವರನ್ನು ಸಹಾಯ ಮಾಡುವವರೆಂದೂ ದರಿದ್ರರ ಮೇಲೆ ಖರ್ಚುಮಾಡುವರೆಂದೂ ಹಝ್ರತ್ ಪೈಗಂಬರಿಗೆ(ಸ) ಗೊತ್ತಿತ್ತು. ಆದರೂ ಹಝ್ರತ್ ಪೈಗಂಬರ್(ಸ) ಹೀಗೆ ಉಪದೇಶಿಸಿದರು: ಈ ಎಲ್ಲ ಅನುಮತಿಯನ್ನು ನಿನಗೆ ನೀಡುತ್ತಿದ್ದೇನೆ. ಅದು ಆಡಂಬರದ ಜೀವನವನ್ನು ನಡೆಸಲಿಕ್ಕಾಗಿ ಅಲ್ಲ. ಬದಲಿಗೆ ನಿನ್ನ ಆವಶ್ಯಕತೆಗಳನ್ನು ಪೂರೈಸಲು ನೀಡುತ್ತಿದ್ದೇನೆ. ಆದ್ದರಿಂದ ಆಡಂಬರದ ಜೀವಿತದಿಂದ ದೂರವಿರಲು ಹೇಳಿದರು. ಹಝ್ರತ್ ಮುಆಧ್(ರ) ಹೇಳುತ್ತಾರೆ: ನಾನು ಯಮನಿನ ಕಡೆಗೆ ರವಾನೆಯಾಗಲು ಕುದುರೆಯ ಮೇಲೇರುವಾಗ, ಹಝ್ರತ್ ಪೈಗಂಬರ್(ಸ) ನನಗೆ ಕೊನೆಯದಾಗಿ ಹೀಗೆ ಉಪದೇಶಿಸಿದರು: ಜನರೊಂದಿಗೆ ಉತ್ತಮವಾಗಿ ವರ್ತಿಸು, ಜನರೊಂದಿಗೆ ಉತ್ತಮವಾಗಿ ವರ್ತಿಸು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–439, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಇಂದಿನ ಮುಸ್ಲಿಮರ ಸ್ಥಿತಿಯನ್ನು ನೋಡಿರಿ.ಅವರು ಉತ್ತಮವಾಗಿ ವರ್ತಿಸುತ್ತಿದ್ದಾರೆಯೇ? ಮೀಲಾದುನ್ನಬಿ ಆಚರಿಸುತ್ತಿದ್ದಾರೆ. ಹಝ್ರತ್ ಪೈಗಂಬರರ(ಸ) ಜೀವಿತಮಾದರಿ ಮತ್ತು ಉಪದೇಶಗಳನ್ನು ಅನುಸರಿಸುವುದಾಗಿದೆ ಯಥಾರ್ಥ ಮೀಲಾದುನ್ನಬಿ ಅಥವಾ ಸೀರತುನ್ನಬಿ ಆಚರಿಸುವ ರೀತಿ.

ಹಝ್ರತ್ ಮುಆಧ್‌ರನ್ನು ಹಝ್ರತ್ ಪೈಗಂಬರ್(ಸ) ಯಮನನ ಕಡೆಗೆ ಅಧಿಕಾರಿಯನ್ನಾಗಿ ಕಳುಹಿಸುವಾಗ, ಅವರ ಸ್ಥಾನ ಮತ್ತು ಪದವಿಯನ್ನು ಈ ವಾಕ್ಯದೊಂದಿಗೆ ವಿವರಿಸಿದರು. **ಇನ್ನೀ ಬಅಸ್ತು ಲಕುಮ್ ಖೈರುನ್ ಅಹ್ಲೀ**. ಎಂದರೆ, ನಾನು ನಮ್ಮ ಜನರ ಪೈಕಿ, ಅತ್ಯುತ್ತಮರಾದ ಒಬ್ಬ ವ್ಯಕ್ತಿಯನ್ನು ನಿಮ್ಮ ಬಳಿಗೆ ಕಳುಹಿಸುತ್ತಿದ್ದೇನೆ. (ಸೈರುಸ್ಸಹಾಬ, ಸಂಪುಟ–3, ಪುಟ–502, ದಾರುಲ್ ಇಶಾಅತ್ ಕರಾಚಿ)

ಇಬ್ನು ಅಬೂ ನಜೀಅ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಮುಆಧ್‌ರನ್ನು(ರ) ಯಮನ್ ನಿವಾಸಿಗಳ ಬಳಿಗೆ ಅಧಿಕಾರಿಯನ್ನಾಗಿ ಕಳುಹಿಸಿದರು. ಯಮನ್ ನಿವಾಸಿಗಳಿಗೆ ಹೀಗೆ ಪತ್ರವನ್ನು ಬರೆದರು: ಖಂಡಿತವಾಗಿಯೂ ನಾನು ನಮ್ಮ ಜನರಲ್ಲಿ ಅತ್ಯುತ್ತಮರಾದ ಒಬ್ಬರನ್ನು ನಿಮ್ಮ ಅಧಿಕಾರಿಯನ್ನಾಗಿ ಮಾಡಿದ್ದೇನೆ. ಅವರು ಅರಿವುಳ್ಳವರೂ ಧರ್ಮಶೀಲರೂ ಆಗಿರುವರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–438–439, ದಾರುಲ್ ಕಲುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಮುಸ್ನದ್ ಅಹ್ಮದ್ ಬಿನ್ ಹಂಬಲ್ ವರದಿ ಮಾಡಿದ ಒಂದು ಹದೀಸಿನಲ್ಲಿ ಹೀಗೆ ಬರುತ್ತದೆ: ಹಝ್ರತ್ ಮುಆಧ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ನನಗೆ ಹತ್ತು ಸಂಗತಿಗಳ ಉಪದೇಶಗಳನ್ನು ಮಾಡುತ್ತಾ ಹೇಳಿದರು: ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡಬೇಡ, ನೀನು ಕೊಲ್ಲಲ್ಪಟ್ಟರೂ ಸರಿ. ಬೆಂಕಿಯಿಂದ ಸುಡಲ್ಪಟ್ಟರೂ ಸರಿ. ತಂದೆತಾಯಂದಿರಿಗೆ ಅವಿಧೇಯತೆ ತೋರಿಸಬೇಡ. ನಿಮ್ಮನ್ನು ಮನೆ ಮತ್ತು ಸಂಪತ್ತಿನಿಂದ ಬೇರ್ಪಡಿಸಿದರೂ ಸರಿ. ಏನೇ ಆದರೂ ಸರಿ, ಹೆತ್ತವರಿಂದ

ಏನೂ ಲಭಿಸದಿದ್ದರೂ ಸರಿ, ಅವರ ಆಜ್ಞೋಲಂಘನೆ ಮಾಡಬಾರದು. ಕಡ್ಡಾಯ ನಮಾಝುನ್ನು ತಿಳಿದೂ ಅನುಷ್ಠಿಸದೇ ಇರಬೇಡ, ಬೇಕಂತಲೇ ಕಡ್ಡಾಯ ನಮಾಝುನ್ನು ಉಪೇಕ್ಷಿಸುವವನು ಅಲ್ಲಾಹನ ಸಂರಕ್ಷಣೆಯಿಂದ ಹೊರಗೆ ಹೋಗುತ್ತಾನೆ. ಶರಾಬನ್ನು ಕುಡಿಯಬೇಡ, ಏಕೆಂದರೆ ಸಾರಾಯಿ ಪ್ರತಿಯೊಂದು ಲಜ್ಜಾಹೀನತೆಯ ಬೇರಾಗಿದೆ. ಪಾಪ ಮತ್ತು ಅಜ್ಞೋಲಂಘನೆಯಿಂದ ದೂರವಿರು. ಏಕೆಂದರೆ, ಪಾಪವು ಅಲ್ಲಾಹನ ಅಸಂತುಷ್ಟಿಗೆ ಕಾರಣವಾಗುತ್ತದೆ. ಶತ್ರುವಿನೊಡನೆ ಹೋರಾಡಬೇಕಾಗಿ ಬಂದರೆ ಪರಾರಿಯಾಗಬೇಡ. ಶತ್ರು ನಿಮ್ಮ ಮುಖಾಮುಖಿಯಾದರೆ, ಹೆದರಿಕೊಂಡು ಓಡಿಹೋಗಬೇಡ. ಜನರೆಲ್ಲರೂ ಕೊಲ್ಲಲ್ಪಟ್ಟರೂ ಸರಿ. ಜನರು ಪ್ಲೇಗ್‌ನಂತಹ ಸಾಂಕ್ರಾಮಿಕ ರೋಗಕ್ಕೆ ತುತ್ತಾಗುವ ವೇಳೆ ನೀನು ಅವರ ನಡುವೆ ಇರುವನಾದರೆ, ನಿನ್ನ ಜಾಗದಲ್ಲೇ ಇರು. ಎಂದರೆ, ಪ್ಲೇಗ್ ರೋಗ ಹರಡಿದರೆ ಅಥವಾ ಸಾಂಕ್ರಾಮಿಕವಾದ ಯಾವುದೇ ರೋಗ ಹರಡುವಾಗ, ರೋಗ ಹರಡಿರುವ ಪ್ರದೇಶದಲ್ಲಿ ನೀನು ಇರುವನಾದರೆ, ಇರುವಲ್ಲೇ ಇರಬೇಕು. ನಿನ್ನ ಕುಟುಂಬದ ಮೇಲೆ ನಿನ್ನ ಶಕ್ತಿಯಾನುಸಾರ ಖರ್ಚುಮಾಡು. ಅವರಿಗೆ ಲಭಿಸಬೇಕಾದ ಹಕ್ಕುಗಳನ್ನು ಪೂರೈಸಿಕೊಡು. ಅವರ ಶಿಕ್ಷಣ ಮತ್ತು ತರಬೇತಿಯಲ್ಲಿ ಯಾವುದೇ ಕೊರತೆ ಉಂಟಾಗದಂತೆ ನೋಡು. ಅವರಿಗೆ ಅಲ್ಲಾಹನ ಮೇಲೆ ಇರಬೇಕಾದ ಭಯಭಕ್ತಿಯ ಬಗ್ಗೆ ನೆನಪಿಸುತ್ತಾ ಇರು. ಈ ಹತ್ತು ಸಂಗತಿಗಳನ್ನು ಹಝ್ರತ್ ಪೈಗಂಬರ್(ಸ) ಅವರಿಗೆ ಹೇಳಿಕೊಟ್ಟರು. (ಮಸ್ನದ್ ಅಹ್ಮದ್ ಬಿನ್ ಹಂಬಲ್ ಸಂಪುಟ–7, ಪುಟ–366, ಹದೀಸ್–22425, ಆಲಿಮುಲ್ ಕುತುಬ್ ಬೈರೂತ್ 1998)

ಹಝ್ರತ್ ಮುಆಧ್‌ರೊಡನೆ(ರ) ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ: ಹೇ ಮುಆಧ್ ನಾನು ಪ್ರೀತಿಯ ಸಹೋದರನ ಹಾಗೆ ನಿನ್ನನ್ನು ಉಪದೇಶಿಸುತ್ತೇನೆ: ಅಲ್ಲಾಹನ ಮೇಲೆ ಭಯಭಕ್ತಿಯನ್ನು ಇರಿಸು. ರೋಗಿಯ ಯೋಗಕ್ಷೇಮವನ್ನು ವಿಚಾರಿಸು, ಪತ್ನಿಯರ ಮತ್ತು ದುರ್ಬಲರ ಆವಶ್ಯಕತೆಗಳನ್ನು ಪೂರೈಸು, ನಿರ್ಗತಿಕರ ಮತ್ತು ಬಡವರೊಂದಿಗೆ ಕುಳಿತುಕೊಳ್ಳು, ಜನರಿಗೆ ತನ್ನ ಕೈಯಿಂದ ನ್ಯಾಯವನ್ನು ಒದಗಿಸಿಕೊಡು, ಸತ್ಯವನ್ನು ಹೇಳು, ಅಲ್ಲಾಹನ ವಿಷಯದಲ್ಲಿ ಯಾವನೇ ದೂಷಕನ ದೂಷನೆ ನಿನಗೆ ಅಡ್ಡಿಯಾಗದಿರಲಿ. (ಕನ್‌ಝುಲ್ ಅಮಾಲ್, ಸಂಪುಟ–15, ಪುಟ–903, ಹದೀಸ್–43555, ಕಿತಾಬುಲ್ ಮವಾಈಝ್...... ಅಲ್‌ಫಸ್ಲುಸ್ಸಾದಿಸ್ ಮುಅಸ್ಸಸುರ‍್ರಿಸಾಲ ಬೈರೂತ್ 1985)

ಹಝ್ರತ್ ಉಮರ್(ರ) ತನ್ನ ಸಂಗಡಿಗರೊಡನೆ ಒಮ್ಮೆ ಹೇಳಿದರು: ಯಾವುದಾದರೂ ಸಂಗತಿಯನ್ನು ಬಯಸಿರಿ. ಒಬ್ಬರು ಹೇಳಿದರು, ಈ ಮನೆ ಚಿನ್ನದಿಂದ ತುಂಬಬೇಕು ಮತ್ತು ಅದನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಬೇಕು, ದಾನ ಮಾಡಬೇಕು ಎಂಬುವುದಾಗಿದೆ ನನ್ನ ಇಚ್ಛೆ. ಮತ್ತೊಬ್ಬ ವ್ಯಕ್ತಿ ಹೇಳಿದರು: ಈ ಮನೆ ವಜ್ರದಿಂದ ತುಂಬಬೇಕು ಮತ್ತು ಅದನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಬೇಕು, ದಾನ ಮಾಡಬೇಕು ಎಂಬುವುದಾಗಿದೆ ನನ್ನ ಇಚ್ಛೆ. ಎಂತಹ ವಿಸ್ಮಯಕರವಾದ ಮತ್ತು ಹಿರಿದಾದ ಅಭಿಲಾಷೆಯಾಗಿತ್ತು ಸಹಾಬಿಯರದ್ದು ಎಂದು ನೋಡಿರಿ. ಹಝ್ರತ್ ಉಮರ್(ರ) ಹೇಳಿದರು: ಇನ್ನೂ ಹೆಚ್ಚು ಬಯಸಿರಿ. ಜನರು ಹೇಳಿದರು: ಯಾ ಅಮೀರುಲ್ ಮೂಮಿನೀನ್, ನಾವು ಏನನ್ನು ಆಶೆಪಡಬೇಕೆಂದು ನಮಗೆ ಗೊತ್ತಾಗುತ್ತಿಲ್ಲ. ಹಝ್ರತ್ ಉಮರ್(ರ) ಹೇಳಿದರು: ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ), ಹಝ್ರತ್ ಮಆಧ್ ಬಿನ್ ಜಬಲ್(ರ), ಹಝ್ರತ್ ಸಾಲಿಂ ಮೌಲಾ ಅಬೂಹುಧೈಫ(ರ) ಮತ್ತು ಹಝ್ರತ್ ಹುಧೈಫ ಬಿನ್ ಯಮಾನ್‌ರಂತಹ ವ್ಯಕ್ತಿಗಳಿಂದ ಈ ಮನೆ ತುಂಬಬೇಕೆಂಬುದುದಾಗಿದೆ ನನ್ನ ಅಭಿಲಾಷೆ. ಹಿಂದೆ ಸಹ ಇದನ್ನು ಹೇಳಲಾಗಿತ್ತು. ಈ ಬಾರಿ ಹಝ್ರತ್ ಮುಆಧ್ ಬಿನ್ ಜಬಲ್‌ರ ಪ್ರಸ್ತಾಪದಲ್ಲೂ ಇದನ್ನು ಹೇಳಿದೆ.
(ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನ್, ಸಂಪುಟ–3, ಪುಟ–252, ಹದೀಸ್–5005, ಕಿತಾಬ್ ಮಾರಿಫತಿಸ್ಸಹಾಬ, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಮುಆಧ್ ಎರಡು ವರ್ಷ ಹಿಜರೀ 9ರಿಂದ 11ರ ತನಕ ಯಮನಿನಲ್ಲಿ ಇದ್ದರು. (ಸೈರುಸ್ಸಹಾಬ ಸಂಪುಟ–3, ಪುಟ–505, ದಾರುಲ್ ಇಶಾಅತ್ ಕರಾಚಿ)

ಒಂದು ಸಲ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ನಾನ್ನೂರು ದೀನಾರನ್ನು ಒಂದು ಚೀಲದಲ್ಲಿ ಹಾಕಿಕೊಂಡು ಗುಲಾಮರೊಡನೆ ಹೇಳಿದರು: ಇದನ್ನು ಹಝ್ರತ್ ಅಬೂ ಉಬೈದ ಬಿನ್ ಜರಾಹ್‌ರ ಬಳಿಗೆ ಕೊಂಡುಹೋಗು ಮತ್ತು ಅವರ ಮನೆಯಲ್ಲಿ ಅವರ ಬಳಿ ಸ್ವಲ್ಪ ಸಮಯ ಇರು. ಅವರು ಈ ಸಂಪತ್ತಿನಿಂದ ಏನು ಮಾಡುವರು ಎಂದು ನೋಡು. ಹಿಂದಿನ ಒಂದು ಖುತ್‌ಬದಲ್ಲಿ, ಹಝ್ರತ್ ಅಬೂ ಉಬೈದ ಬಿನ್ ಜರಾಹ್‌ರ(ರ) ಪ್ರಸ್ತಾಪದಲ್ಲಿ ಇದನ್ನು ಹೇಳಿದ್ದೆ. ಆದರೆ, ಅದರ ಉಳಿದ ವಿವರಣೆ ಬಾಕಿಯಿತ್ತು. ಆದ್ದರಿಂದ ಅದರ ಪೂರ್ಣರೂಪವನ್ನು ಈಗ ವಿವರಿಸುತ್ತೇನೆ. ಹೀಗೆ ಆ ಗುಲಾಮನು ಚೀಲವನ್ನು ತೆಗೆದುಕೊಂಡು ಅವರ ಬಳಿಗೆ ಹೋಗಿ ಅವರೊಡನೆ ಹೀಗೆ ಹೇಳಿದರು: ಈ ದೀನಾರ್‌ಗಳನ್ನು ನಮ್ಮ ಆವಶ್ಯಕತೆಗಳನ್ನು ಪೂರೈಸಲು ಉಪಯೋಗಿಸಲು ಅಮೀರುಲ್ ಮೂಮಿನೀನ್ ಹೇಳಿರುವರು. ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಹೇಳಿದರು: ಅಲ್ಲಾಹನು ಅವರ ಮೇಲೆ ಕೃಪೆದೋರಲಿ. ಅನಂತರ ಅವರು ಅವರ ದಾಸಿಯನ್ನು ಕರೆದು ಹೀಗೆ ಹೇಳಿದರು: ಈ ಏಳು ದೀನಾರ್ ಈ ವ್ಯಕ್ತಿಯ ಬಳಿಗೆ ಕೊಂಡುಹೋಗು, ಈ ಐದು ದೀನಾರ್ ಈ ಇಂತಿಂಥ ವ್ಯಕ್ತಿಗೆ ಕೊಡು, ಈ ಐದು ದೀನಾರ್ ಈ ವ್ಯಕ್ತಿಗೆ ಕೊಡು. ಹೀಗೆ ಅವೆಲ್ಲವೂ ಮುಗಿಯಿತು. ಎಂದರೆ, ಅವರ ದಾಸಿಯನ್ನು ಕರೆದುಕೊಂಡು ವಿವಿಧ ಬಡವರ ಮನೆಗಳಿಗೆ ಆ ದೀನಾರ್‌ಗಳನ್ನು ಕೊಟ್ಟುಬರಲು ಹೇಳಿದ್ದರು. ಹೀಗೆ ಆ ಗುಲಾಮ ಹಝ್ರತ್ ಉಮರರ(ರ) ಬಳಿಗೆ ಬಂದು ಎಲ್ಲ ವಿವರವನ್ನು ತಿಳಿಸಿದನು. ಹಝ್ರತ್ ಉಮರ್(ರ) ಅಷ್ಟೇ ದೀನಾರ್‌ಗಳನ್ನು ಹಝ್ರತ್ ಮುಆಧ್‌ರಿಗೂ(ರ) ತಯಾರುಮಾಡಿಟ್ಟಿದ್ದರು. ಹಝ್ರತ್ ಅಬೂ ಉಬೈದರಿಗೆ(ರ) ಕಳುಹಿಸಿದಷ್ಟೆ ದೀನಾರ್‌ಗಳು ಹಝ್ರತ್ ಮುಆಧ್‌ರಿಗೂ(ರ) ಇನ್ನೊಂದು ಚೀಲದಲ್ಲಿ ತಯಾರುಮಾಡಿಟ್ಟಿದ್ದರು. ಗುಲಾಮರೊಡನೆ ಹೇಳಿದರು: ಇದನ್ನು ಹಝ್ರತ್ ಮುಆಧ್‌ರ(ರ) ಬಳಿಗೆ ಕೊಂಡುಹೋಗು. ಅವರ ಮನೆಯಲ್ಲಿ ಸ್ವಲ್ಪ ಸಮಯ ಇರು. ಈ ಸಂಪತ್ತನ್ನು ಅವರು ಏನು ಮಾಡುತ್ತಾರೆ ಎಂದು ನೋಡು. ಹೀಗೆ ಆ ಗುಲಾಮನು ಚೀಲವನ್ನು ತೆಗೆದುಕೊಂಡು ಹಝ್ರತ್ ಮುಆಧ್‌ರ ಬಳಿಗೆ ಹೋಗಿ ಅವರೊಡನೆ ಹೀಗೆ ಹೇಳಿದರು: ಈ ದೀನಾರ್‌ಗಳನ್ನು ನಿಮ್ಮ ಆವಶ್ಯಕತೆಗಳನ್ನು ಪೂರೈಸಲು ಉಪಯೋಗಿಸಲು ಅಮೀರುಲ್ ಮೂಮಿನೀನ್ ಹೇಳಿರುವರು. ಹಝ್ರತ್ ಮುಆಧ್(ರ) ಹೇಳಿದರು: ಅಲ್ಲಾಹನು ಅವರ ಮೇಲೆ ಕೃಪೆದೋರಲಿ. ಅನಂತರ ಅವರು ಅವರ ದಾಸಿಯನ್ನು ಕರೆದು ಹೀಗೆ ಹೇಳಿದರು: ಇಷ್ಟು ದೀನಾರ್ ಈ ವ್ಯಕ್ತಿಯ ಬಳಿಗೆ ಕೊಂಡುಹೋಗು, ಇಷ್ಟು ದೀನಾರ್ ಇಂತಿಂಥ ವ್ಯಕ್ತಿಗೆ ಕೊಡು. ಅಷ್ಟರಲ್ಲಿ ಹಝ್ರತ್ ಮುಆಧ್‌ರ(ರ) ಪತ್ನಿ ಸಹ ಬಂದು ಹೇಳಿದರು: ಅಲ್ಲಾಹನಾಣೆ, ನಾವು ಸಹ ಬಡವರೇ ಆಗಿದ್ದೇವೆ. ಮನೆಯಲ್ಲಿ ಕೂಡ ಏನೂ ಇಲ್ಲ. ಸ್ವಲ್ಪ ಮನೆಯ ಆವಶ್ಯಕತೆಗಾಗಿಯೂ ಇರಿಸು. ಹಝ್ರತ್ ಮುಆಧ್(ರ) ಲಾಭಗಳನ್ನು ಪಡೆಯುತ್ತಿದ್ದ ಮತ್ತು ಕಾಣಿಕೆಗಳನ್ನು ಸ್ವೀಕರಿಸುತ್ತಿದ್ದ ಬಗ್ಗೆ ಹಿಂದೆ ಹೇಳಲಾಗಿತ್ತು. ಅದರ ನಿಜಸ್ಥಿತಿ ಇಲ್ಲಿ ಸ್ಪಷ್ಟವಾಗುತ್ತದೆ. ಮನೆಯಲ್ಲಿ ಕೂಡ ಏನೂ ಇಲ್ಲ, ನಾವು ಸಹ ದರಿದ್ದರೇ, ನಮಗೂ ಕೊಡಿರಿ ಎಂದು ಅವರ ಪತ್ನಿ ಹೇಳುತ್ತಿದ್ದಾರೆ. ಚೀಲದಲ್ಲಿ ಆಗ ಕೇವಲ ಎರಡು ದೀನಾರ್ ಬಾಕಿಯಿತ್ತು. ಬಾಕಿಯೆಲ್ಲವನ್ನು ಅವರು ವಿತರಿಸಿ ಆಗಿತ್ತು. ಹಝ್ರತ್ ಮುಆಧ್(ರ) ಅದರಲ್ಲಿ ಇದ್ದ ಎರಡು ದೀನಾರ್‌ಗಳನ್ನು ತನ್ನ ಪತ್ನಿಯ ಕಡೆಗೆ ಎಸೆದರು. ಆ ಗುಲಾಮ ಹಝ್ರತ್ ಉಮರರ(ರ) ಬಳಿಗೆ ಬಂದು ಎಲ್ಲ ವಿವರವನ್ನು ತಿಳಿಸಿದನು. ಹಝ್ರತ್ ಉಮರ್(ರ) ಇದನ್ನು ಕೇಳಿ ತುಂಬ ಸಂತೋಷಗೊಂಡು ಹೀಗೆ ಹೇಳಿದರು: ಖಂಡಿತವಾಗಿಯೂ ಇವರಿಬ್ಬರೂ ಎಂದರೆ, ಹಝ್ರತ್ ಉಬೈದ(ರ) ಮತ್ತು ಹಝ್ರತ್ ಮುಆಧ್(ರ)ಪರಸ್ಪರ ಸಹೋದರರಾಗಿರುವರು.
(ಮಜ್‌ಮಅಝ್ಝವಾಏದ್, ಸಂಪುಟ–3, ಪುಟ–234, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಖರ್ಚು ಮಾಡುವುದರಲ್ಲಿ ಇವರಿಬ್ಬರು ಒಂದೇ ಗುಣವನ್ನು ಹೊಂದಿರುವರು.

ಶರೀಹ್ ಬಿನ್ ಉಬೈದ್ ಮತ್ತು ರಾಶಿದ್ ಬಿನ್ ಸಅದ್ ಮುಂತಾದವರಿಂದ ಹೀಗೆ ವರದಿಯಾಗಿದೆ: ಹಝ್ರತ್ ಉಮರ್(ರ) ಸರಗ್ ಎಂಬ ಸ್ಥಳಕ್ಕೆ ತಲುಪಿದಾಗ, ಸಿರಿಯಾದಲ್ಲಿ ತೀವ್ರವಾದ ಸಾಂಕ್ರಾಮಿಕ ಹರಡಿರುವ ಬಗ್ಗೆ ಹೇಳಲಾಯಿತು. ಸರಗ್ ಎಂಬುದು ತಬೂಕ್ ಕಣಿವೆಯ ಒಂದು ಹಳ್ಳಿಯ ಹೆಸರಾಗಿದೆ. ಹಝ್ರತ್ ಉಮರ್(ರ) ಹೇಳಿದರು: ಸಿರಿಯಾದಲ್ಲಿ ತೀವ್ರವಾಗಿ ಸಾಂಕ್ರಾಮಿಕ ರೋಗ ಹರಡಿದೆ ಎಂದು ನನಗೆ ಮಾಹಿತಿ ಸಿಕ್ಕಿದೆ. ನನ್ನ ಮರಣದ ಸಮಯ ಬರುವಾಗ, ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಜೀವಂತವಾಗಿ ಇರುವರಾದರೆ, ನಾನು ಅವರನ್ನು ನನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸುವೆನು. ಅಲ್ಲಾಹನು ಇದರ ಬಗ್ಗೆ ನೀನೇಕೆ ಅವರನ್ನು ಉಮ್ಮತೇ ಮುಹಮ್ಮದಿಯಾದ ಖಲೀಫರನ್ನಾಗಿ ಮಾಡಿದೆ ಎಂದು ಕೇಳಿದರೆ, ಪ್ರತಿ ನಬಿಗೆ ಒಬ್ಬ ಅಮೀನ್ ಇರುತ್ತಾರೆ, ನನ್ನ ಅಮೀನ್ ಅಬೂ ಉಬೈದ ಬಿನ್ ಜರಾಹ್(ರ) ಆಗಿರುವರು ಎಂದು ನಿನ್ನ ರಸೂಲ್ ಹೇಳಿದ್ದಾಗಿ ನಾನು ಕೇಳಿದ್ದೇನೆ ಎಂದು ಹೇಳುವೆನು. ಇದು ಸಹ ಹಿಂದೆ ಪ್ರಸ್ತಾಪಿಸಲಾಗಿತ್ತು. ಜನರಿಗೆ ಈ ಸಂಗತಿ ಇಷ್ಟವಾಗಲಿಲ್ಲ. ಅವರು ಹೇಳಿದರು: ಖುರೈಶಿನ ಹಿರಿಯ ಜನರಾದ, ಬನೂ ಫಹರ್‌ನ ಸ್ಥಿತಿಯೇನಾಗುವುದು. ಅನಂತರ ಹಝ್ರತ್ ಉಮರ್(ರ) ಹೇಳಿದರು: ನನ್ನ ಮರಣದ ಸಮಯ ಬರುವಾಗ, ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ) ಸಹ ನಿಧನರಾಗಿರುವರಾದರೆ, ಹಝ್ರತ್ ಮುಆಧ್ ಬಿನ್ ಜಬಲ್‌ರನ್ನು(ರ) ಖಲೀಫರನ್ನಾಗಿ ನಿಶ್ಚಯಿಸುವೆನು. ನೀನು ಅವರನ್ನು ಏಕೆ ಖಲೀಫರನ್ನಾಗಿ ಮಾಡಿದೆ ಎಂದು ಅಲ್ಲಾಹನು ನನ್ನೊಡನೆ ಕೇಳಿದರೆ, ನಾನು ಹೀಗೆ ಹೇಳುವೆನು: ಅವರು ಖಿಯಾಮತ್ ದಿನದಂದು

ಪಂಡಿತರ ಮುಂದೆ ಮುಂದೆ ತರಲಾಗುವುದು ಎಂದು ನಿನ್ನ ಪೈಗಂಬರ್(ಸ) ಹೇಳಿದ್ದಾಗಿ ನಾನು ಕೇಳಿದ್ದೇನೆ. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–1, ಪುಟ–109, ಹದೀಸ್–108, ಆಲಿಮುಲ್ ಕಿತಾಬ್ ಬೈರೂಥ್ 1998) (ಮುಜಮುಲ್ ಬಲದಾನ್ ಸಂಪುಟ–3, ಪುಟ–239)

ಹಝ್ರತ್ ಮುಆಧ್‌ರಿಗೆ(ರ) ಅರಿವಿನ ವಿಷಯದಲ್ಲಿ ಹಿರಿದಾದ ಸ್ಥಾನವಿದ್ದಿರಬಹುದು. ಹಿಜರಿ 15ರಲ್ಲಿ ಯರ್ಮೂಕ್ ಯುದ್ಧದ ಸಂದರ್ಭದಲ್ಲಿ ಕಮಾಂಡರಿನ ಬಲಗಡೆಯಿರುವ ಸೈನ್ಯದ ಅಧಿಕಾರಿಯರನ್ನಾಗಿ ಹಝ್ರತ್ ಮುಆಧ್ ಬಿನ್ ಜಬಲ್(ರ) ಮತ್ತು ಹಝ್ರತ್ ಅಬೂ ಉಬೈದ ಬಿನ್ ಜರಾಹ್‌ರನ್ನು(ರ) ನಿಶ್ಚಯಿಸಲಾಗಿತ್ತು. ಕ್ರೈಸ್ತರ ಆಕ್ರಮಣ ಬಹಳ ತೀವ್ರವಾದಾಗ, ಮುಸ್ಲಿಮರ ಈ ಬಲಗಡೆಯ ಸೈನ್ಯವು ಮುಖ್ಯವಾದ ಸೈನ್ಯದಿಂದ ಬೇರ್ಪಟ್ಟು ಚೆಲ್ಲಾಪಿಲ್ಲಿಯಾಯಿತು. ಈ ಸ್ಥಿತಿಯನ್ನು ನೋಡಿದ ಹಝ್ರತ್ ಮುಆಧ್(ರ) ಬಹಳ ಶೌರ್ಯದ ಮತ್ತು ಸ್ಥಿರಚಿತ್ತತೆಯನ್ನು ತೋರಿಸಿದರು. ಕುದುರೆಯಿಂದ ಕೆಳಗೆ ಇಳಿದು ಹೇಳಿದರು: ನಾನೀಗ ಕಾಲ್ನಡಿಗೆಯಾಗಿ ಹೋರಾಡುವೆನು. ಈ ಕುದುರೆಯಿಂದ ಉತ್ತಮ ರೀತಿಯಲ್ಲಿ ಪ್ರಯೋಜನ ಪಡೆಯಲು ಶೂರರಾದ ಯಾರಾದರೂ ಇಚ್ಛಿಸುವರಾದರೆ, ಕುದುರೆ ಅವನಿಗಾಗಿ ಸಿದ್ಧವಾಗಿದೆ. ಅವರ ಮಗನು ಸಹ ಯುದ್ಧ ಮೈದಾನದಲ್ಲಿ ಇದ್ದರು. 'ನಾನು ಇದರಿಂದ ಸರಿಯಾದ ಪ್ರಯೋಜನವನ್ನು ಪಡೆಯುವೆನು, ಏಕೆಂದರೆ, ನಾನು ಸವಾರನಾಗಿ ಉತ್ತಮ ರೀತಿಯಲ್ಲಿ ಹೋರಾಡಬಲ್ಲೆನು' ಎಂದು ಮಗನು ಹೇಳಿದನು. ಒಟ್ಟಿನಲ್ಲಿ ತಂದೆ ಮತ್ತು ಮಗನು ಶತ್ರು ಸೈನ್ಯದ ಪಂಕ್ತಿಯನ್ನು ಮುರಿಯುತ್ತಾ ಒಳಗೆ ನುಗ್ಗಿದ್ದರು.ಎಷ್ಟು ಧೈರ್ಯದಿಂದ ಹೋರಾಡಿದರೆಂದರೆ, ಮುಸ್ಲಿಮರ ಅಸ್ಥಿರವಾದ ಕಾಲುಗಳು ಪುನಃ ಸ್ಥಿರಗೊಂಡಿದುವು. (ಸೈರುಸ್ಸಹಾಬ, ಸಂಪುಟ–3, ಪುಟ–508, ದಾರುಲ್ ಇಶಾಅತ್ ಕರಚಿ) (ಫೀರೋಝುಲ್ಲುಗಾತ್ ಪುಟ–1332)

ಅವರ ಅಸ್ಥಿರತೆಯು ಸ್ಥಿರತೆಯಾಗಿ ಮಾರ್ಪಟಿತು. ಭಯದ ಅವಸ್ಥೆಯಿತ್ತು. ಅನಂತರ ಶತ್ರುಗಳನ್ನು ಸೋಲಿಸಿ ಮುಸ್ಲಿಮರ ವಿಜಯಕ್ಕೆ ನೆರವಾದರು. ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಮುಆಧ್(ರ) ಹೇಳಿದ್ದನ್ನು ಅಬೂ ಇದ್ರೀಸ್ ಖ್ಹೂಲಾನಿ ವಿವರಿಸುತ್ತಾರೆ: ಸಿರಿಯದ ಮಸೀದಿಯಲ್ಲಿ ಪ್ರವೇಶಿಸಿದಾಗ, ಅಲ್ಲಿ ಹೊಳೆಯುವ ಹಲ್ಲುಗಳಿರುವ ಯುವಕ ಇದ್ದರು. ಅವರ ಸುತ್ತ ಜನರು ಒಟ್ಟುಗೂಡಿದ್ದರು. ಜನರೆಡೆಯಲ್ಲಿ ಯಾವುದಾದರೂ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದಾದರೆ, ಅದನ್ನು ಅವರ ಬಳಿಗೆ ತರಲಾಗುತ್ತಿತ್ತು. ಅವರ ಅಭಿಪ್ರಾಯಗಳಿಗೆ ಬೆಲೆಕೊಡುತ್ತಿದ್ದರು. ನಾನು ಅವರ ಬಗ್ಗೆ ಕೇಳಿದಾಗ, ಅವರು ಹಝ್ರತ್ ಮುಆಧ್ ಬಿನ್ ಜಬಲ್(ರ) ಎಂದು ಹೇಳಲಾಯಿತು. ಮುಂದಿನ ದಿನ ನಾನು ಮಧ್ಯಾಹ್ನ ಸಮಯದಲ್ಲಿ ಹೋದಾಗ, ಅವರು ನನಗಿಂತ ಮುಂಚಿತವಾಗಿ ಮಧ್ಯಾಹ್ನ ಸಮಯದಲ್ಲಿ ಮಸೀದಿಯಲ್ಲಿ ಇದ್ದರು. ಅವರು ನಮಾಝ್ ಮಾಡುತ್ತಿರುವುದಾಗಿ ನಾನು ಕಂಡೆನು. ನಾನು ಕಾಯುತ್ತಾ ನಿಂತೆನು. ಅವರು ನಮಾಝ್ ನಿರ್ವಹಿಸಿದ್ದ ನಂತರ ನಾನು ಅವರ ಮುಂದೆ ಹೋದೆನು. ಅವರು ನನಗೆ ಸಲಾಂ ಹೇಳಿದರು. ನಾನು ಅವರೊಡನೆ ಹೇಳಿದೆ: ಅಲ್ಲಾಹನಾಣೆ, ನನಗೆ ಅಲ್ಲಾಹನಿಗಾಗಿ ನಿಮ್ಮೊಡನೆ ಪ್ರೀತಿಯಿದೆ. ಅವರು ಕೇಳಿದರು: ಅಲ್ಲಾಹನಾಣೆ? ನಾನು ಹೇಳಿದೆ: ಹೌದು ಅಲ್ಲಾಹನಾಣೆ. ಅವರು ಪುನಃ ಕೇಳಿದರು: ಅಲ್ಲಾಹನಾಣೆ? ನಾನು ಹೇಳಿದೆ: ಹೌದು ಅಲ್ಲಾಹನಾಣೆ. ಆಗ ಅವರು ನನ್ನ ಚಾದರಿನ ಮೂಲೆಯನ್ನು ಹಿಡಿದುಕೊಂಡು ತನ್ನೆಡೆಗೆ ಎಳೆದು ಹೇಳಿದರು: ಸಂತೋಷವಾಗಿರು, ಏಕೆಂದರೆ, ನಾನು ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ಕೇಳಿದ್ದೇನೆ: ಅಲ್ಲಾಹನು ಹೇಳುತ್ತಾನೆ: ನನಗಾಗಿ ಪರಸ್ಪರ ಪ್ರೀತಿಸುವವರ, ನನ್ನ ಸಲುವಾಗಿ ಒಟ್ಟಿಗೆ ಕುಳಿತುಕೊಳ್ಳುವವರ, ನನ್ನ ಪರವಾಗಿ ಪರಸ್ಪರ ಭೇಟಿಯಾಗುವವರ, ನನಗಾಗಿ ಪರಸ್ಪರ ಖರ್ಚು ಮಾಡುವವರ ಮೇಲೆ ನನ್ನ ಸಂಪ್ರೀತಿ ಕಡ್ಡಾಯವಾಯಿತು. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–353–354, ಹದೀಸ್–22380, ಆಲಿಮುಲ್ ಕುತುಬ್ ಬೈರೂತ್ 1998)

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಮುಆಧ್‌ರಿಗೆ(ರ) ಇಬ್ಬರು ಪತ್ನಿಯರಿದ್ದರು. ಒಬ್ಬಳ ಬಳಿಯಲ್ಲಿರುವಾಗ ಮತ್ತೊಬಳ ಕಡೆಯಿಂದ ನೀರು ಸಹ ಕುಡಿಯುತ್ತಿರಲಿಲ್ಲ. ಅಷ್ಟಕ್ಕೂ ನ್ಯಾಯದಿಂದ ಮತ್ತು ಪಕ್ಷಪಾತರಹಿತವಾಗಿ ವರ್ತಿಸುತ್ತಿದ್ದರು. ಒಂದು ವರದಿಯಲ್ಲಿ ಹೀಗೆಯೂ ಬಂದಿದೆ: ಹಝ್ರತ್ ಮುಆಧ್‌ರಿಗೆ(ರ) ಇಬ್ಬರು ಪತ್ನಿಯರಿದ್ದರು. ಒಬ್ಬಳ ಬಳಿಯಲ್ಲಿರುವಾಗ ಮತ್ತೊಬಳ ಕಡೆಯಿಂದ ವುಝೂ ಸಹ ಮಾಡುತ್ತಿರಲಿಲ್ಲ. ಈ ಇಬ್ಬರು ಪತ್ನಿಯಂದಿರು ಸಿರಿಯಾ ದೇಶದಲ್ಲಿದ್ದಾಗ, ಸಾಂಕ್ರಾಮಿಕ ರೋಗದಿಂದ ಮೃತಪಟ್ಟರು. ಅವರಿಬ್ಬರನ್ನೂ ಒಂದೇ ಖಬರಿನಲ್ಲಿ ದಫನ್ ಮಾಡಲಾಗಿತ್ತು. ದಫನ್ ಮಾಡುವಾಗ ಹಝ್ರತ್ ಮುಆಧ್(ರ) ಚೀಟಿಯೆತ್ತಿ ಯಾರನ್ನು ಮೊದಲು ಗೋರಿಯೊಳಗೆ ಹಾಕುವುದು ಎಂದು ತೀರ್ಮಾನಿಸಿದ್ದರು. ಇದಾಗಿತ್ತು ಅವರ ನ್ಯಾಯದ ಮಟ್ಟ. (ಹಲೀಯತುಲ್ ಔಲಿಯಾ, ಸಂಪುಟ–1, ಭಾಗ–1, ಪುಟ–204, ದಾರುಲ್ ಇಶಾಅತ್ ಕರಾಚಿ 2006)

ಸೇರೇ ಸಹಾಬದ ಇನ್ನೊಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಮುಆಧ್‌ರಿಗೆ(ರ) ಇಬ್ಬರು ಪತ್ನಿಯರಿದ್ದರು. ಇಬ್ಬರೂ ಅಮ್‌ವಾಸ್ ಎಂಬ ಹೆಸರಿನ ಪ್ಲೇಗಿನಿಂದ ಮೃತಪಟ್ಟಿದ್ದರು. ಅವರಿಗೆ ಅಬ್ದುರ್ರಹ್ಮಾನ್ ಎಂಬ ಹೆಸರಿನ ಮಗನಿದ್ದದ್ದಾಗಿ ತಿಳಿದುಬರುತ್ತದೆ. ಆ ಮಗನು ಯರ್ಮೂಕ್ ಯುದ್ಧದಲ್ಲಿ ಹಝ್ರತ್ ಮುಆಧ್‌ರೊಂದಿಗೆ(ರ) ಭಾಗವಹಿಸಿದ್ದರು. ಆ ಮಗನು ಸಹ ಅಮ್‌ವಾಸ್ ಪ್ಲೇಗಿನಿಂದ ಮೃತಪಟ್ಟಿದ್ದರು. (ಎಂದರೆ, ಆ ಕಾಲದಲ್ಲಿ ಹರಡಿದ್ದ ಪ್ಲೇಗಿನಿಂದ) (ಸೈರುಸ್ಸಹಾಬ, ಸಂಪುಟ–3, ಪುಟ–510–511, ದಾರುಲ್ ಇಶಾಅತ್ ಕರಾಚಿ)

ಹಝ್ರತ್ ಅಬೂಉಬೈದ(ರ) ಅಮ್‌ವಾಸ್ ಪ್ಲೇಗಿನಿಂದ ನಿಧನರಾದಾಗ, ಹಝ್ರತ್ ಮುಆಧ್‌ರನ್ನು(ರ) ಹಝ್ರತ್ ಉಮರ್(ರ) ಸಿರಿಯಾದ ಅಧಿಕಾರಿಯನ್ನಾಗಿ ನಿಶ್ಚಯಿಸಿದರು. ಅಮ್‌ವಾಸ್ ಎಂಬುದು ಒಂದು ಊರಿನ ಹೆಸರಾಗಿದೆ. ಇದರ ವಿವರವನ್ನು ನಾನು ಹಿಂದೆ ಸಹ ಹೇಳಿದ್ದೆ. ಈ ಊರು ಯರ್ಮಲದಿಂದ ಏಳು ಮೈಲು ದೂರದಲ್ಲಿದೆ. ಬೈತುಲ್ ಮುಖದ್ದಿಸಿಗೆ ಹೋಗುವ ದಾರಿಯಲ್ಲಿ ಈ ಊರು ಸಿಗುತ್ತದೆ. ಹಝ್ರತ್ ಮುಆಧ್(ರ) ಸಹ ಇದೇ ಪ್ಲೇಗ್ ರೋಗದಿಂದ ನಿಧನರಾಗಿದ್ದರು. (ಅಲ್‌ಇಸ್ತಿಆಬ್, ಸಂಪುಟ–3, ಪುಟ–1405, ದಾರುಲ್ ಜೀಲ್ ಬೈರೂತ್) (ಮುಜಮುಲ್ ಬಲದಾನ್ 4, ಪುಟ–177–178)

ಕಸೀರ್ ಬಿನ್ ಮುರ್ರ ವರದಿ ಮಾಡುತ್ತಾರೆ: ಹಝ್ರತ್ ಮುಆಧ್(ರ) ತನ್ನ ರೋಗಾವಸ್ಥೆಯಲ್ಲಿ ನಮ್ಮೊಡನೆ ಹೇಳಿದರು: ನಾನು ಹಝ್ರತ್ ಪೈಗಂಬರರಿಂದ(ಸ) ಒಂದು ಮಾತನ್ನು ಕೇಳಿದ್ದೇನೆ, ಅದನ್ನು ನಾನು ನಿಮ್ಮೊಡನೆ ಹೇಳದೆ ರಹಸ್ಯವಾಗಿ ಇಟ್ಟಿದ್ದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಯಾರ ಕೊನೆಯ ಮಾತು **ಲಾ ಇಲಾಹ ಇಲ್ಲಲ್ಲಾಹ್** ಎಂದಾಗಿರುವುದೋ ಅವನಿಗೆ ಸ್ವರ್ಗ ಕಡ್ಡಾಯವಾಯಿತು. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–355, ಹದೀಸ್–22383, ಆಲಿಮುಲ್ ಕುತುಬ್ ಬೈರೂತ್ 1998)

ಮತ್ತೊಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಮುಆಧ್ ಹೇಳಿದರು: ನೀವು ಇದರ ಮೇಲೆ ಭರವಸೆಯಿರಿಸಿಕೊಂಡು ಇತರ ಸತ್ಕರ್ಮಗಳನ್ನು ಮಾಡುವುದನ್ನು ಬಿಟ್ಟುಬಿಡುವಿರಿ ಎಂಬ ಕಾರಣದಿಂದ ಮಾತ್ರ ಈ ಹದೀಸನ್ನು ಇಷ್ಟರ ವರೆಗೆ ಹೇಳದೇ ಇದ್ದೆ. ಸಿರಿಯಾದಲ್ಲಿ ಪ್ಲೇಗ್ ಹರಡಿದಾಗ, ಹಝ್ರತ್ ಮುಆಧ್ ಬಿನ್ ಜಬಲ್‌ರಿಗೂ(ರ) ಪ್ಲೇಗ್ ರೋಗ ಬಂದಿತ್ತು. ಈ ಕಾರಣದಿಂದ ಅವರು ಮೂರ್ಛೆ ಹೋದರು. ಸ್ವಲ್ಪ ಎಚ್ಚರವಾದಾಗ ಹೀಗೆ ಹೇಳಿದರು: ಹೇ ಅಲ್ಲಾಹ್, ನಿನ್ನ ಅತ್ಯುನ್ನತ ಸ್ಥಾನ ಆಣೆಯನ್ನು ಹಾಕಿ ಹೇಳುತ್ತೇನೆ. ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದು ನಿನಗೆ ಗೊತ್ತು. ಅನಂತರ ಅವರು ಪುನಃ ಪ್ರಜ್ಞಾಹೀನರಾದರು. ಆರೋಗ್ಯ ಸ್ವಲ್ಪ ಸುಧಾರಿಸಿದಾಗ ಪುನಃ ಹೀಗೆಯೇ ಹೇಳಿದರು.

ಹಝ್ರತ್ ಮುಆಧ್ ಬಿನ್ ಜಬಲ್‌ರ(ರ) ಮರಣದ ಸಮಯ ಸಮೀಪವಾದಾಗ, ಬೆಳಿಗ್ಗೆ ಆಯಿತೇ ಎಂದು ಕೇಳಿದರು. ಇಲ್ಲ, ಈಗ ಬೆಳಿಗ್ಗೆ ಆಗಿಲ್ಲವೆಂದು ಹೇಳಲಾಯಿತು. ಅನಂತರ ಬೆಳಿಗ್ಗೆ ಆದಾಗ, ಬೆಳಿಗ್ಗೆ ಆಯಿತೆಂದು ಅವರೊಡನೆ ಹೇಳಲಾಯಿತು. ಹಝ್ರತ್ ಮುಆಧ್(ರ) ಹೇಳಿದರು: ಯಾವ ರಾತ್ರಿಯ ಬೆಳಿಗ್ಗೆ ನರಕದ ಕಡೆಗೆ ಕೊಂಡುಹೋಗುವುದೋ ನಾನು ಆ ರಾತ್ರಿಯಿಂದ ಅಲ್ಲಾಹನ ಅಭಯವನ್ನು ಯಾಚಿಸುತ್ತೇನೆ. ಮರಣವನ್ನು ಸ್ವಾಗತಿಸುತ್ತೇನೆ. ತನ್ನ ಪ್ರಿಯದೇವನನ್ನು ಭೇಟಿಯಾಗುವವರನ್ನು ಸ್ವಾಗತಿಸುತ್ತೇನೆ. ಮರಣವೂ ಬಹಳ ದೀರ್ಘಕಾಲದ ನಂತರ ಬಂದಿದೆ. ಹೇ ಅಲ್ಲಾಹ್, ನಾನು ನಿನ್ನನ್ನು ಭಯಪಡುತ್ತೇನೆ ಎಂದು ನಿನಗೆ ಗೊತ್ತು, ಆದರೆ ಇಂದು ನಾನು ತುಂಬ ಪ್ರತೀಕ್ಷೆಯಲ್ಲಿದ್ದೇನೆ. ನಾನು ಇಹಲೋಕ ಮತ್ತು ದೀರ್ಘಾಯುಸ್ಸನ್ನು ಇಷ್ಟಪಡುವುದು, ಕಾಲುವೆಗಳನ್ನು ತಯಾರು ಮಾಡಲಿಕ್ಕೂ, ಮರಗಳನ್ನು ನೆಡಲಿಕ್ಕೂ ಅಲ್ಲ. ಬದಲಿಗೆ, ಮಧ್ಯಾಹ್ನದ ಬಾಯಾರಿಕೆ ಮತ್ತು ಪರಿಸ್ಥಿತಿಯ ಕಷ್ಟತೆಗಳನ್ನು ಸಹಿಸಲಿಕ್ಕೂ ಪಂಡಿತರೊಂದಿಗೆ ಕುಳಿತುಕೊಂಡು ನಿನ್ನನ್ನು ಸ್ಮರಿಸಲಿಕ್ಕೂ ಆಗಿದೆ. ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಮುಆಧ್‌ರಿಗೆ(ರ) ನಿಧನದ ಸಮಯ ಸನ್ನಿಹಿತವಾದಾಗ, ಅವರು ಅಳಲು ಆರಂಭಿಸಿದರು. ನೀವಂತು ಹಝ್ರತ್ ಪೈಗಂಬರರ(ರ) ಸಂಗಡಿಗರಾಗಿದ್ದೀರಿ, ನೀವೇಕೆ ಅಳುತ್ತಿದ್ದೀರಿ ಎಂದು ಕೇಳಲಾಯಿತು. ಅವರು ಹೇಳಿದರು: ನಾನು ಮರಣದ ದುಃಖದಿಂದ ಅಳುತ್ತಿಲ್ಲ, ಇಹಲೋಕವನ್ನು ಬಿಟ್ಟುಹೋಗುತ್ತಿದ್ದೀನೆ ಎಂಬ ದುಃಖದಿಂದಲೂ ಅಳುತ್ತಿಲ್ಲ. ನಾನು ಅಳುವುದೇಕೆಂದರೆ, ಎರಡು ಪಂಗಡಗಳಿರುವುವು. ಒಂದು ಸ್ವರ್ಗವಾಸಿಯರದ್ದು ಮತ್ತೊಂದು ನರಕವಾಸಿಯರದ್ದು. ನಾನು ಯಾವ ಪಂಗಡದವನಾಗಿ ಎಬ್ಬಿಸಲ್ಪಡುವವನು ಎಂದು ನಾನು ತಿಳಿಯದು. ಆದ್ದರಿಂದ ಅಳುತ್ತಿದ್ದೇನೆ. (ಅಸದುಲ್ ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–5, ಪುಟ–189, ದಾರುಲ; ಕುತುಬ್ ಇಲ್ಮಿಯ ಬೈರೂತ್)

ಮುಸ್ನದ್ ಅಹ್ಮದ್ ಬಿನ್ ಹಂಬಲಿನ ಒಂದು ವರದಿ ಹೀಗಿದೆ: ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಮುಆದ್(ರ) ಹೇಳುತ್ತಾರೆ: ಸಮೀಪ ಕಾಲದಲ್ಲೇ, ನೀನು ಸಿರಿಯಾದ ಕಡೆಗೆ ಹಿಜ್ರತ್ ಮಾಡುವೆ ಮತ್ತು ನಿನ್ನ ಕೈಗಳಿಂದ ಅದರ ಮೇಲೆ ವಿಜಯ ಸಾಧಿಸಲಾಗುವುದು. ಆದರೆ ಅಲ್ಲಿ ಕುರು ಮತ್ತು ಬೊಕ್ಕೆಗಳ ಒಂದು ಕಾಯಿಲೆ ನಿನಗೆ ಬರುವುದು. ಆ ರೋಗದ ಮೂಲಕ ಅಲ್ಲಾಹನು ಮುಸ್ಲಿಮರಿಗೆ ಶಹಾದತ್ ನೀಡುವನು. ಅವರ ಕರ್ಮಗಳನ್ನು ಶುದ್ಧೀಕರಿಸುವನು. ಹೇ ಅಲ್ಲಾಹ್, ಹಝ್ರತ್ ಮುಆಧ್(ರ) ನನ್ನಿಂದ ಎಂದರೆ, ಹಝ್ರತ್ ಪೈಗಂಬರರಿಂದ(ಸ) ಈ ಹದೀಸನ್ನು ಕೇಳಿದ್ದಾರೆ ಎಂದು ನಿನಗೆ ಗೊತ್ತು. ಆದ್ದರಿಂದ ಅವರಿಗೂ ಅವರ ಕುಟುಂಬಕ್ಕೂ ಇದರಿಂದ, ಈ ರೋಗದ ಹಿರಿಯ ಭಾಗವನ್ನು ನೀಡು. ಹೀಗೆ ಅವರೆಲ್ಲರೂ ಈ ಪ್ಲೇಗಿಗೆ ತುತ್ತಾದರು ಮತ್ತು ಅವರಲ್ಲಿ ಒಬ್ಬರೂ ಜೀವಂತವಾಗಿ ಉಳಿಯಲಿಲ್ಲ. ಹಝ್ರತ್ ಮುಆಧ್‌ರ(ರ) ತೋರುಬೆರಳಲ್ಲಿ ಬೊಕ್ಕೆಯಾದಾಗ, ಅವರು ಹೀಗೆ ಹೇಳುತ್ತಿದ್ದರು: ನನಗೆ ಈ ಕುರುವಿನ ಬದಲಿಗೆ ಕೆಂಪು ಒಂಟೆ ಸಿಕ್ಕುವುದು ಕೂಡ ಇಷ್ಟವಲ್ಲ. ನಾನು ಇದರಿಂದಲೇ ಸಂತೋಷವಾಗಿದ್ದೇನೆ. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–371, ಹದೀಸ್–22439. ಆಲಿಮುಲ್ ಕುತುಬ್ ಬೈರೂತ್ 1998)

ತಾರೀಖ್ ತಬರಿಯಲ್ಲಿ ಹೀಗೆ ಬರೆಯಲಾಗಿದೆ: ಅವರ ಅಂಗೈಯಲ್ಲಿ ಗಡ್ಡೆಯಾದಾಗ, ಅವರು ಅವರ ಅಂಗೈಯನ್ನು ನೋಡುತ್ತಿದ್ದರು ಮತ್ತು ಆ ಕೈಯ ಹಿಂಭಾಗವನ್ನು ಚುಂಬಿಸುತ್ತಿದ್ದರು ಹಾಗೂ ಹೀಗೆ ಹೇಳುತ್ತಿದ್ದರು: ನಿನ್ನ ಬದಲಿಗೆ ಲೋಕದ ಯಾವುದೇ ವಸ್ತು ನನಗೆ ಸಿಗುವುದು ನನಗೆ ಇಷ್ಟವಿಲ್ಲ. (ತಾರೀಖ್ ತಿಬರಿ, ಭಾಗ–4, ಪುಟ–238, ದಾರುಲ್ ಫಿಕರ್ ಬೈರೂತ್)

ಹಿಜರೀ 18ರಲ್ಲಿ ಹಝ್ರತ್ ಮುಆಧ್ ಬಿನ್ ಜಬಲ್(ರ) ನಿಧನರಾದರು. ಅವರ ವಯಸ್ಸಿನ ಬಗ್ಗೆ ವಿವಿಧ ಅಭಿಪ್ರಾಯಗಳಿವೆ. ಅವುಗಳ ಪ್ರಕಾರ ಅವರಿಗೆ 33, 34 ಅಥವಾ 38 ವರ್ಷ ಪ್ರಾಯವಿದ್ದಿತು ಎಂದು ಹೇಳಲಾಗಿದೆ. (ಅಸದುಲ್ ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–5, ಪುಟ–190, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

157 ಹದೀಸುಗಳು ಹಝ್ರತ್ ಮುಆಧ್‌ರಿಂದ ವರದಿಯಾಗಿವೆ. ಅವುಗಳಲ್ಲಿ ಎರಡು ಹದೀಸುಗಳು ಎರಡರಲ್ಲೂ ಇವೆ. (ಸೈರುಸ್ಸಹಾಬ, ಸಂಪುಟ–3, ಭಾಗ–5, ಪುಟ–156, ಇದಾರ ಇಸ್ಲಾಮಿಯಾತ್ ಲಾಹೋರ್)

ಇನ್ನು ಪ್ರಸ್ತಾಪಿಸುವ ಸಹಾಬಿಯ ಹೆಸರು ಅಬ್ದುಲ್ಲಾಹ್ ಬಿನ್ ಅಮರ್ ಎಂದಾಗಿದೆ. ಹಝ್ರತ್ ಅಬ್ದುಲ್ಲಾಹ್‌ರ ಸಂಬಂಧ ಅನ್ಸಾರಿನ ಗೋತ್ರವಾದ ಖ಼ಝ್ರಜಿನ ಶಾಖೆ ಬನೂ ಸಲ್ಮಾದೊಂದಿಗೆ ಆಗಿತ್ತು. ಅವರ ತಂದೆಯ ಹೆಸರು ಅಮ್ರ್ ಬಿನ್ ಹರಾಂ ಮತ್ತು ತಾಯಿಯ ಹೆಸರು ರುಬಾಬ್ ಬಿನ್ತ್ ಖೈಸ್ ಎಂದಾಗಿತ್ತು. (ಅತ್ತಬಖಾತುಲ್ ಕುಬ್ರ ಭಾಗ–3 ಪುಟ–423, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ ಹಿಜ್ರತಿಗೆ ಸುಮಾರು ನಲ್ವತ್ತು ವರ್ಷಗಳ ಹಿಂದೆ ಜನಿಸಿದ್ದರು. ಎಂದರೆ, ಹಿಜ್ರತ್ ಸಮಯದಲ್ಲಿ ಅವರಿಗೆ ನಲ್ವತ್ತು ವರ್ಷ ಪ್ರಾಯವಿದ್ದಿತ್ತು. ಅವರು ಪ್ರಸಿದ್ಧ ಸಹಾಬಿಯಾದ ಜಾಬಿರ್ ಬಿನ್ ಅಬ್ದುಲ್ಲಾಹ್‌ರ ತಂದೆಯಾಗಿದ್ದರು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ ಭಾಗ–4, ಪುಟ–162, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ ಹಝ್ರತ್ ಅಮ್ರ್ ಬಿನ್ ಜಮೂಹ್‌ರ ಹೆಂಡತಿಯ ತಮ್ಮವಾಗಿದ್ದರು. (ಖುತ್‌ಬಾತೆ ತಾಹಿರ್, ಬಾಷಣ ಜಲ್ಸ ಸಾಲಾನ 1979, ಪುಟ–349)

ಹಝ್ರತ್ ಅಬ್ದುಲ್ಲಾ ಬಿನ್ ಉಮ್ರೊ ಅವರು ಅಖಬದಲ್ಲಿ ನಡೆದ ಎರಡನೇ ಬೈಅತಿನಲ್ಲಿ ಒಳಪಟ್ಟಿದ್ದರು. ಹಝ್ರತ್ ಪೈಗಂಬರ್(ಸ) ನಿಶ್ಚಯಿಸಿದ ಹನ್ನೆರಡು ದೂತರಲ್ಲಿ ಒಬ್ಬರಾಗಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು ಮತ್ತು ಉಹದ್ ಯುದ್ಧದಲ್ಲಿ ಶಹೀದಾದರು. ಕೆಲವರ ಅಭಿಪ್ರಾಯ ಪ್ರಕಾರ ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ ಉಹದ್ ಯುದ್ಧದಲ್ಲಿ ಮುಸ್ಲಿಮರ ಕಡೆಯಿಂದ ಮೊತ್ತಮೊದಲು ಶಹೀದಾದ ವ್ಯಕ್ತಿಯಾಗಿದ್ದರು. (ಅಲ್‌ಇಸ್ತಿಆಬ್ ಫೀ ಮಾರಿಫತಿಲ್ ಅಸ್ಹಾಬ್, ಭಾಗ–3, ಪುಟ–84, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಇವರು ಸತ್ಯವಿಶ್ವಾಸ ಸ್ವೀಕರಿಸಿದ ಘಟನೆ ಹೀಗೆ ವರದಿಯಾಗಿದೆ: ಹಝ್ರತ್ ಕಅ್‌ಬ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ನಾವು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ತಶ್ರೀಕಿನ ದಿನಗಳಲ್ಲಿ, ಎಂದರೆ ಹಜ್ಜಿನ ಕೊನೆಯ ಮೂರು ದಿನಗಳಾದ ಧುಲ್‌ಹಜ್ಜ 11, 12, 13ರಂದು ಭೇಟಿಯಾಗುವ ವಾಗ್ದಾನ ಮಾಡಿದ್ದೆವು. ನಮ್ಮೊಂದಿಗೆ ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ ಸಹ ಇದ್ದರು.ಅವರು ನಮ್ಮ ಸರದಾರರಲ್ಲಿ ಒಬ್ಬರಾಗಿದ್ದರು. ನಾವು ಅವರನ್ನು ಸಹ ನಮ್ಮೊಂದಿಗೆ ಕೊಂಡು ಹೋಗಿದ್ದೆವು. ನಾವು ನಮ್ಮ ಜನರಾದ ಮುಶ್ರಿಕರಿಂದ ನಮ್ಮ ಈ ಭೇಟಿಯ ಬಗ್ಗೆ ಹೇಳಿರಲಿಲ್ಲ. ನಾವು ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್‌ರೊಡನೆ ಹೇಳಿದೆವು: ಹೇ ಅಬೂ ಜಾಬಿರ್, ಇದು ಅವರ ಉಪನಾಮವಾಗಿತ್ತು. ಅವರನ್ನು ಹೀಗೆಯೂ ಕರೆಯಲಾಗುತ್ತಿತ್ತು. ನೀವು ನಮ್ಮ ಸರದಾರರಾಗಿರುವಿರಿ. ನಮ್ಮ ನಡುವೆ ಇರುವ ಮಾನ್ಯ ವ್ಯಕ್ತಿಯಾಗಿರುವಿರಿ. ನೀವು ನರಕದ ಇಂಧನವಾಗುವುದು ನಮಗೆ ಇಷ್ಟವಿಲ್ಲ. ಹೀಗೆ ನಾವು ಅವರಿಗೆ ಇಸ್ಲಾಮಿನ ಕಡೆಗೆ ಆಮಂತ್ರಿಸಿದೆವು. ಹಝ್ರತ್ ಪೈಗಂಬರರನ್ನು ಭೇಟಿಯಾಗಲು ಅಕ್‌ವ ಎಂಬ ಸ್ಥಳಕ್ಕೆ ಹೋಗುವುದರ ಬಗ್ಗೆ ತಿಳಿಸಿದೆವು. ಹೀಗೆ ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು.ಬೈಅತ್ ಅಖಬದಲ್ಲಿ ಭಾಗವಹಿಸಿದರು. ದೂತರಾಗಿ ನಿಶ್ಚಯಿಸಲ್ಪಟ್ಟರು. (ಸೀರತ್ ಇಬ್ನೆ ಹಿಶ್ಯಾಮ್, ಭಾಗ–1, ಪುಟ–236, ದಾರ್ ಇಬ್ನೆ ಹಝುಮ್ ಬೈರೂಥ್ 2009) (ಉರ್ದು ದಾಎರಹ್ ಮಆರಿಫ್ ಇಸ್ಲಾಮಿಯ ಸಂಪುಟ–6, ಪುಟ–413)

ಹಝ್ರತ್ ಜಾಬಿರ್ ಬಿನ್ ಅಮ್ರ್ ವರದಿ ಮಾಡುತ್ತಾರೆ: ನಾನು, ನನ್ನ ತಂದೆ ಮತ್ತು ನನ್ನ ಇಬ್ಬರು ಮಾವಂದಿರರು ಅಖಬದ ಬೈಅತಿನಲ್ಲಿ ಇದ್ದ ಸಹಾಬಿಯರಲ್ಲಿ ಸೇರಿದ್ದವರಾಗಿದ್ದೇವೆ. ಇಬ್ನು ಐನಯ ಎಂಬ ಹೆಸರಿನ ವರದಿಗಾರ ಹೇಳುತ್ತಾರೆ: ಅವರಲ್ಲಿ ಒಬ್ಬರು ಬರಾ ಬಿನ್ ಮಅ್‌ರೂರ್ ಆಗಿದ್ದಾರೆ.

(ಸಹೀಹ್ ಬುಖಾರಿ ಕಿತಾಬುಲ್ ಮನಾಖಿಬ್, ಹದೀಸ್–3890–3891)

ಅಖಬದಲ್ಲಿ ನಡೆದ ಎರಡನೇ ಬೈಅತಿನ ಬಗ್ಗೆ ಸೀರತ್ ಖ಼ಾತಮುನ್ನಬಿಯ್ಯೀನ್‌ನಿಂದ ಒಂದು ವಿವರಣೆಯನ್ನು ಎರಡು ಸಹಾಬಿಯರ ಪ್ರಸ್ತಾಪದಲ್ಲಿ ಹೇಳಿದ್ದೆ. ಇಲ್ಲಿ ಅದರ ಸ್ವಲ್ಪ ಭಾಗವನ್ನು ಪುನಃ ಹೇಳುತ್ತೇನೆ. ಅಖಬದಲ್ಲಿ ನಡೆದ ಎರಡನೇ ಬೈಅತಿನ ಬಗ್ಗೆ ಸೀರತ್ ಖ಼ಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್‌ರಿಗೆ ಸಂಬಂಧಿಸಿ ಬರೆಯಲಾದ ಭಾಗವನ್ನು ಇಲ್ಲಿ ಹೇಳುತ್ತೇನೆ:

ಧುಲ್‌ಹಜ್ಜ್ ತಿಂಗಳ ಹದಿಮೂರನೇ ತಾರೀಕಿನಂದು, ಹಜ್ಜ್ ಸಮಯದಲ್ಲಿ ಔಸ್ ಮತ್ತು ಖ಼ಝ್ರಜ್ ಗೋತ್ರದ ನೂರಾರು ಜನರು ಮಕ್ಕಕ್ಕೆ ಬಂದರು. ಅವರಲ್ಲಿ ಎಪ್ಪತ್ತರಷ್ಟು ಜನರು ಮುಸ್ಲಿಮರಾಗಿದ್ದರು ಅಥವಾ ಮುಸ್ಲಿಮರಾಗಲು ಇಚ್ಛಿಸುತ್ತಿದ್ದರು. ಅವರು ಹಝ್ರತ್ ಪೈಗಂಬರರನ್ನು ಭೇಟಿಯಾಗಲು ಮಕ್ಕಕ್ಕೆ ಬಂದಿದ್ದರು.

ಈ ಸಂದರ್ಭದಲ್ಲಿ ಒಂದು ಸಾಮೂಹಿಕ ಮತ್ತು ವೈಯಕ್ತಿಕವಾದ ಭೇಟಿಯ ಆವಶ್ಯಕತೆಯಿತ್ತು. ಹಜ್ಜ್ ಕರ್ಮದ ನಂತರ ಧುಲ್‌ಹಜ್ಜ್ ತಿಂಗಳ ಮಧ್ಯದ ದಿನಾಂಕವನ್ನು ನಿಶ್ಚಯಿಸಲಾಗಿತ್ತು. ಆ ದಿನದಂದು ಮಧ್ಯರಾತ್ರಿಯ ವೇಳೆ ಈ ಎಲ್ಲ ಜನರು ಕಣಿವೆ ಸಮೀಪ ಹಝ್ರತ್ ಪೈಗಂಬರರನ್ನು ಭೇಟಿಯಾಗಲು ಬಂದಿದ್ದರು. ಸಮಾಧಾನದಿಂದ ಮತ್ತು ಗಮನವಿಟ್ಟು ಮಾತುಕತೆ ನಡೆಸಲು ಹೀಗೆ ನಿಶ್ಚಯಿಸಲಾಗಿತ್ತು. ಹಝ್ರತ್ ಪೈಗಂಬರರು(ಸ) ಅನ್ಸಾರರೊಡನೆ ಹೀಗೆ ತಾಕೀತು ಮಾಡಿದ್ದರು: ಒಟ್ಟಿಗೆ ಬರಬೇಡಿರಿ, ಒಬ್ಬೊಬ್ಬರಾಗಿ ಅಥವಾ ಇಬ್ಬರಿಬ್ಬರು ನಿಶ್ಚಿತ ಸಮಯದಲ್ಲಿ ಕಣಿವೆಯ ಸಮೀಪಕ್ಕೆ ಬನ್ನಿರಿ. ನಿದ್ದೆಹೋದವರನ್ನು ಎಬ್ಬಿಸಬೇಡಿರಿ. ಹಾಜರಿಲ್ಲದವರನ್ನು ಕಾಯಬೇಡಿರಿ. ಹೀಗೆ ನಿಶ್ಚಿತ ದಿನ ಬಂದಾಗ, ರಾತ್ರಿ ಸಮಯದಲ್ಲಿ, ರಾತ್ರಿಯ ಒಂದು ಭಾಗ ಕೊನೆಗೊಂಡ ನಂತರ, ಎಂದರೆ ಮಧ್ಯರಾತ್ರಿ ಸಮಯದಲ್ಲಿ, ಹಝ್ರತ್ ಪೈಗಂಬರ್(ಸ) ಮನೆಯಿಂದ ಹೊರಟರು. ದಾರಿಯಲ್ಲಿ ಅವರ ದೊಡ್ಡಪ್ಪರಾದ ಅಬ್ಬಾಸ್‌ರನ್ನು ತನ್ನೊಂದಿಗೆ ಕರಕೊಂಡು ಹೋದರು. ಅವರು ಆ ಸಮಯದಲ್ಲಿ ಮುಶ್ರಿಕ್ ಆಗಿದ್ದರು. ಆದರೆ ಅವರಿಗೆ ಹಝ್ರತ್ ಪೈಗಂಬರರೊಡನೆ ಪ್ರೀತಿಯಿತ್ತು. ಅವರು ಹಾಶಿಂ ಕುಟುಂಬದ ಸರದಾರರಾಗಿದ್ದರು. ಹೀಗೆ ಇವರಿಬ್ಬರೂ ಆ ಕಣಿವೆಗೆ ತಲುಪಿದರು. ಹೆಚ್ಚು ಸಮಯ ಆಗಿರಲಿಲ್ಲ. ಅಷ್ಟರಲ್ಲೇ ಅನ್ಸಾರರು ಸಹ ಒಬ್ಬೊಬ್ಬರಾಗಿ, ಇಬ್ಬಿಬ್ಬರಾಗಿ ಕಣಿವೆಗೆ ತಲುಪಿದರು. ಇವರು ಒಟ್ಟು ಎಪ್ಪತ್ತು ಜನರಿದ್ದರು. ಔಸ್ ಮತ್ತು ಖ಼ಝ್ರಜ್ ಎರಡೂ ಗೋತ್ರಗಳಿಂದ ಸಂಬಂಧ ಹೊಂದಿದ್ದವರಾಗಿದ್ದರು.

ಮೊಟ್ಟಮೊದಲು ಅಬ್ಬಾಸ್ ಮಾತುಕತೆ ಆರಂಭಿಸಿದರು. ಅವರು ಹೇಳಿದರು: ಎಲೈ ಖಝ್ರಜಿನ ಸಮೂಹವೇ, ಮುಹಮದ್(ಸ) ತನ್ನ ಕುಟುಂಬದಲ್ಲಿ ಆದರಣೀಯ ಮತ್ತು ಪ್ರಿಯ ವ್ಯಕ್ತಿಯಾಗಿರುವರು. ಅವರ ಕುಟುಂಬ ಇಂದಿನ ವರೆಗೆ ಅವರ ಸಂರಕ್ಷಣೆಯ ಹೊಣೆಯನ್ನು ಹೊತ್ತಿತ್ತು. ಪ್ರತಿಯೊಂದು ಅಪಾಯದ ವೇಳೆ ಅವರಿಗಾಗಿ ಜೀವದ ಹಂಗು ತೊರೆದು ಹೋರಾಡಿದೆ. ಆದರೆ ಈಗ ಅವರು ತಮ್ಮ ಊರನ್ನು ಬಿಟ್ಟು ನಿಮ್ಮ ಬಳಿಗೆ ಬರಲು ಉದ್ದೇಶಿಸಿರುವರು. ಆದ್ದರಿಂದ ನೀವು ಇವರನ್ನು ತಮ್ಮೊಂದಿಗೆ ಕೊಂಡುಹೋಗಲು ಇಚ್ಛಿಸುವಿರಾದರೆ, ನೀವು ಇವರನ್ನು ಎಲ್ಲ ರೀತಿಯಲ್ಲಿ ಸಂರಕ್ಷಿಸಬೇಕಾಗುವುದು. ಪ್ರತಿಯೊಬ್ಬ ಶತ್ರುವಿನ ಮುಂದೆ ಜೀವದ ಹಂಗುತೊರೆದು ಹೋರಾಡಬೇಕಾಗುವುದು. ನೀವು ಅದಕ್ಕೆ ತಯಾರಾಗಿರುವಿರಿ ಎಂದಾದರೆ, ಒಳ್ಳೆಯದು. ಇಲ್ಲದಿದ್ದರೆ, ಈಗಲೇ ನೇರವಾಗಿ ಮತ್ತು ರುಜುವಾಗಿ ಉತ್ತರ ಹೇಳಿರಿ. ಏಕೆಂದರೆ ನೇರವಾದ ಮತ್ತು ಸತ್ಯವಾದ ಮಾತು ಒಳ್ಳೆಯದಾಗಿರುತ್ತದೆ.

ಅನ್ಸಾರರ ಗೋತ್ರದ ಹಿರಿಯ ಮತ್ತು ಪ್ರಭಾವಶಾಲಿ ವ್ಯಕ್ತಿಯಾಗಿದ್ದ ಬರಾ ಬಿನ್ ಮಅ್‌ರೂರ್ ಹೇಳಿದರು: ಹೇ ಅಬ್ಬಾಸ್, ನಾವು ನಿಮ್ಮ ಮಾತುಗಳನ್ನು ಕೇಳಿದ್ದೇವೆ. ಆದರೆ, ಹಝ್ರತ್ ಪೈಗಂಬರ್(ಸ) ಸ್ವತಃ ತನ್ನ ನಾಲಗೆಯಿಂದ ಏನಾದರೂ ಹೇಳಲಿ ಎಂದು ನಾವು ಬಯಸುತ್ತಿದ್ದೇವೆ. ನಮ್ಮ ಮೇಲೆ ಅವರು ಇರಿಸಲು ಇಚ್ಛಿಸುವ ಜವಾಬ್ದಾರಿಗಳ ಬಗ್ಗೆ ಅವರು ಹೇಳಲಿ. ಆಗ ಹಝ್ರತ್ ಪೈಗಂಬರ್(ಸ) ಪವಿತ್ರ ಖುರ್‌ಆನಿನ ಕೆಲವು ವಚನಗಳನ್ನು ಪಾರಾಯಣ ಮಾಡಿದರು ಮತ್ತು ಸಂಕ್ಷಿಪ್ತವಾಗಿ ಒಂದು ಭಾಷಣವನ್ನು ಮಾಡಿದರು. ಅದರಲ್ಲಿ ಇಸ್ಲಾಮಿನ ಅಧ್ಯಾಪನೆಗಳ ಬಗ್ಗೆ ಹೇಳಿದರು. ಅಲ್ಲಾಹನಿಗೆ ಮತ್ತು ಅಲ್ಲಾಹನ ದಾಸರಿಗೆ ಸಲ್ಲಬೇಕಾದ ಹಕ್ಕುಗಳ ಬಗ್ಗೆ ವಿವರಿಸಿದರು. ಅನಂತರ ಹೇಳಿದರು: ನೀವು ಯಾವ ರೀತಿಯಲ್ಲಿ ನಿಮ್ಮ ಸ್ನೇಹಿತರನ್ನು ಮತ್ತು ಸಂಬಂಧಿಕರನ್ನು ಸಂರಕ್ಷಿಸುತ್ತೀರೋ ಅದೇ ರೀತಿಯಲ್ಲಿ, ಆವಶ್ಯಬಂದರೆ ನನ್ನೊಡನೆ ವರ್ತಿಸಿರಿ. ಇಷ್ಟನ್ನು ಮಾತ್ರ ನಾನು ಬಯಸುತ್ತೇನೆ. ಹಝ್ರತ್ ಪೈಗಂಬರ್(ಸ) ತನ್ನ ಭಾಷಣವನ್ನು ಕೊನೆಗೊಳಿಸಿದಾಗ, ಇಬ್ನು ಮಅ್‌ರೂರ್ ಅರೇಬಿಯದ ರೂಢಿಯ ಪ್ರಕಾರ, ಹಝ್ರತ್ ಪೈಗಂಬರರ(ಸ) ಕೈಯನ್ನು ತನ್ನ ಕೈಯಲ್ಲಿ ಇಟ್ಟುಕೊಂಡು ಹೇಳಿದರು: ಯಾ ರಸೂಲಲ್ಲಾಹ್, ನಿಮ್ಮನ್ನು ಯಥಾರ್ಥ ಸತ್ಯದೊಂದಿಗೆ ಕಳುಹಿಸಿದ ಅಲ್ಲಾಹನಾಣೆ, ನಾವು ನಮ್ಮ ಜೀವದ ಹಾಗೆಯೇ ನಿಮ್ಮನ್ನು ಸಂರಕ್ಷಿಸುವೆವು. ಅವರಲ್ಲಿ ಒಬ್ಬರು ಹಝ್ರತ್ ಪೈಗಂಬರರೊಡನೆ(ಸ) ಕೇಳಿದರು: ಹೀಗೆಯೇ ಮಾಡುವೆವು ಎಂದು ನಾವು ಪ್ರತಿಜ್ಞೆ ಮಾಡುತ್ತೇವೆ. ಆದರೆ, ಆದರೆ ನಿಮಗೆ ವಿಜಯ ಲಭಿಸಿದರೆ, ನಮ್ಮನ್ನು ಬಿಟ್ಟುಹೋಗಲಾರಿರಿ ತಾನೆ? ಇದಕ್ಕೆ ಉತ್ತರವಾಗಿ ಹಝ್ರತ್ ಪೈಗಂಬರ್(ಸ) ಮುಗುಳ್ನಗುತ್ತಾ ಹೇಳಿದರು: ನಿಮ್ಮ ರಕ್ತ ನನ್ನ ರಕ್ತವಾಗಿರುವುದು, ನಿಮ್ಮ ಸ್ನೇಹಿತರು ನನ್ನ ಸ್ನೇಹಿತರಾಗಿರವರು. ನಿಮ್ಮ ಶತ್ರುಗಳು ನನ್ನ ಶತ್ರುಗಳಾಗಿರುವರು. ಆಗ ಅಬ್ಬಾಸ್ ಬಿನ್ ಉಬಾದ ಅನ್ಸಾರಿ ತಮ್ಮ ಸಂಗಡಿಗರನ್ನು ದಿಟ್ಟಿಸಿ ನೋಡುತ್ತಾ ಹೇಳಿದರು: ಜನರೇ, ಈ ಪ್ರತಿಜ್ಞೆಯ ಅರ್ಥವೇನೆಂದು ನೀವು ತಿಳಿದಿದ್ದೀರಾ? ಇದರ ಅರ್ಥವೇನೆಂದರೆ, ಈಗಿನಿಂದ ನೀವು ಪ್ರತಿಯೊಬ್ಬ ಶತ್ರುವಿನೊಡನೆ ಅವರು ಕಪ್ಪು, ಬಿಳಿ, ಕೆಂಪು ಯಾವುದೇ ಬಣ್ಣದವರಾಗಿದ್ದರೂ ಅವರ ವಿರುದ್ಧ ಹೋರಾಡಲು ತಯಾರಾಗಿರಬೇಕು. ಎಲ್ಲ ರೀತಿಯ ತ್ಯಾಗಗಳಿಗೆ ತಯಾರಾಗಿರಬೇಕು. ಜನರು ಹೇಳಿದರು: ಹೌದು, ನಮಗೆ ಇದು ಗೊತ್ತಿದೆ. ಆದರೆ ಯಾ ರಸೂಲಲ್ಲಾಹ್, ಇದರ ಬದಲಿಗೆ ನಮಗೆ ಏನು ಸಿಗುವುದು? ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮಗೆ ಅಲ್ಲಾಹನ ಸ್ವರ್ಗ ಸಿಗುವುದು. ಅದು ಅವನ ಎಲ್ಲ ಇನಾಮುಗಳಿಗಿಂತ ಹಿರಿದಾದ ಇನಾಮಾಗಿದೆ. ಸರಿ, ನಾವು ಈ ವ್ಯಾಪಾರವನ್ನು ಅಂಗೀಕರಿಸುತ್ತೇವೆ ಎಂದು ಎಲ್ಲರು ಹೇಳಿದರು. ಯಾ ರಸೂಲಲ್ಲಾಹ್, ನೀವು ನಿಮ್ಮ ಕೈಯನ್ನು ಮುಂದಿರಿಸಿರಿ. ಹಝ್ರತ್ ಪೈಗಂಬರ್(ಸ) ಅವರ ಅನುಗ್ರಹೀತ ಕೈಯನ್ನು ಮುಂದಿಟ್ಟರು. ಈ ಎಪ್ಪತ್ತು ಜನರ ತ್ಯಾಗಶೀಲರ ಸಂಘ ಸಂರಕ್ಷಣೆಯ ಪ್ರತಿಜ್ಞೆಯೊಂದಿಗೆ ಹಝ್ರತ್ ಪೈಗಂಬರರ ಕೈಯಲ್ಲಿ ಬೈಅತ್ ಮಾಡಿದರು. ಈ ಬೈಅತಿನ ಹೆಸರು ಬೈಅತ್ ಅಖ್‌ಬ ಸಾನಿಯ ಎಂದಾಗಿದೆ.

ಬೈಅತ್ ಆದ ನಂತರ ಹಝ್ರತ್ ಪೈಗಂಬರ್(ಸ) ಅವರೊಡನೆ ಹೇಳಿದರು: ಮೂಸಾ(ಅ) ತಮ್ಮ ಸಮುದಾಯಕ್ಕಾಗಿ ಹನ್ನೆರಡು ದೂತರನ್ನು ಆಯ್ಕೆ ಮಾಡಿದ್ದರು. ಅವರು ಮೂಸಾರಿಗಾಗಿ ಅವರ ಮೇಲ್ನೋಟಗಾರ ಮತ್ತು ಸಂರಕ್ಷಕರಾಗಿದ್ದರು. ನಾನು ಸಹ ನಿಮ್ಮಿಂದ ಹನ್ನೆರಡು ದೂತರನ್ನು ನಿಶ್ಚಯಿಸಲು ಬಯಸುತ್ತೇನೆ. ಅವರು ನಮ್ಮ ಮೇಲ್ನೋಟಗಾರ ಮತ್ತು ಸಂರಕ್ಷಕರಾಗಿರುವರು. ಅವರು ನನಗೆ ಹಝ್ರತ್ ಈಸಾರಬಿ ಹವಾರಿಗಳಂತಾಗಿರುವರು. ಅವರು ತಮ್ಮ ಸಮುದಾಯದ ಬಗ್ಗೆ ನನಗೆ ಜವಾಬು ಕೊಡಬೇಕಾಗುವುದು. ಆದ್ದರಿಂದ ನೀವು ಅನುಯೋಜ್ಯವಾದ ಜನರ ಹೆಸರನ್ನು ಸಮಾಲೋಚಿಸಿ ನನಗೆ ಹೇಳಿಕೊಡಿರಿ. ಹೀಗೆ ಹನ್ನೆರಡು ವ್ಯಕ್ತಿಗಳನ್ನು ಚುನಾಯಿಸಲಾಯಿತು. ಅವರ ಮಂಜೂರಾತಿಯನ್ನು ಹಝ್ರತ್ ಪೈಗಂಬರ್(ಸ) ಹೇಳಿದರು. ಅವರನ್ನು ಒಂದೊಂದು ಗೋತ್ರದ ಮೇಲ್ನೋಟಗಾರನ್ನಾಗಿ ನಿಶ್ಚಯಿಸಿ ಅವರ ಕರ್ತವ್ಯಗಳನ್ನು ಹೇಳಕೊಡಲಾಯಿತು. ಕೆಲವು ಗೋತ್ರಗಳಿಗೆ ಅವರು ಎರಡೆರಡು ಮೇಲ್ನೋಟಗಾರರನ್ನು ನಿಶ್ಚಯಿಸಿದ್ದರು. ಹೇಗಿದ್ದರೂ ಈ ಹನ್ನೆರಡು ದೂತರಲ್ಲಿ ಅಬ್ದುಲ್ಲಾಹ್ ಬಿನ್ ಅಮ್ರ್‌ರ ಹೆಸರು ಸಹ ಒಳಪಟ್ಟಿದೆ. ಅವರನ್ನು ಸಹ ಹಝ್ರತ್ ಪೈಗಂಬರ್(ಸ) ದೂತರಾಗಿ ನಿಶ್ಚಯಿಸಿದ್ದರು. (ಸೀರತ್ ಖಾತುಮುನ್ನಬೀಈನ್, ಪುಟ–227–231)

ಒಂದು ವರದಿಯಲ್ಲಿ ಹೀಗ ಬರುತ್ತದೆ. ಉಹದ್ ಯುದ್ಧದ ಸಂದರ್ಭದಲ್ಲಿ ಅಬ್ದುಲ್ಲಾಹ್ ಬಿನ್ ಉಬಯ್ಯ್ ಬಿನ್ ಸಲೂಲ್ ಮೋಸವಾಡಿ ಬಂಡಾಯವೆದ್ದಾಗ, ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್(ರ) ಆ ಜನರನ್ನು ಉಪದೇಶಿಸಲು ಪ್ರಯತ್ನಿಸಿದ್ದರು. (ಗಝ್‌ವಾ ಎ ಉಹದ್, ಅಲ್ಲಾಮ ಮುಹಮ್ಮದ್ ಅಹ್ಮದ್ ಹಾಶ್ಮಿ, ಪುಟ–215, ನಫೀಸ್ ಅಕಾಡಮಿ ಉರ್ದು ಬಜಾರ್ ಕರಾಚಿ 1989)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ನನ್ನ ತಂದೆಯಾದ ಅಬ್ದುಲ್ಲಾಹ್ ಬಿನ್ ಅಮ್ರ್(ರ) ಮತ್ತು ನನ್ನ ಮಾವ ಉಹದ್ ಯುದ್ಧದಲ್ಲಿ ಶಹೀದ್ ಆದಾಗ, ನನ್ನ ತಾಯಿ, ಇನ್ನೊಂದು ವರದಿಯ ಪ್ರಕಾರ ತಂದೆಯ ಸಹೋದರಿ, ಎಂದರೆ ಹಝ್ರತ್ ಅಮ್ರ್ ಬಿನ್ ಜಮೂಹ್‌ರ ಪತ್ನಿ, ಅವರಿಬ್ಬರನ್ನೂ ಒಂಟೆಯ ಮೇಲೆ ಇರಿಸಿಕೊಂಡು ಮದೀನಕ್ಕೆ ಕೊಂಡುಬರುತ್ತಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಾಗಿ ಘೋಷಣೆ ಮಾಡುವವರು ಹೀಗೆ ಘೋಷಣೆ ಮಾಡಿದರು: ಕೊಲ್ಲಲ್ಪಟ್ಟ ಮುಸ್ಲಿಮರನ್ನು ಅವರು ಕೊಲ್ಲಲ್ಪಟ್ಟ ಸ್ಥಳದಲ್ಲೇ ದಫನ್ ಮಾಡಿರಿ. ಆಗ ಅವರಿಬ್ಬರನ್ನೂ ಮರಳಿ ಕೊಂಡುಹೋಗಲಾಯಿತು.ಅವರನ್ನು ಅವರು ಹೋರಾಡುತ್ತಿದ್ದ ಸ್ಥಳದಲ್ಲೇ ದಫನ್ ಮಾಡಲಾಯಿತು.
(ಅತ್ತಬಖಾತುಲ್ ಕುಬ್ರ, ಭಾಗ–3, ಪುಟ–423, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಅಲ್‌ಅಸಾಬ ಫೀ ತಮೀಝಿಸ್ಸಹಾಬ ಸಂಪುಟ–2, ಪುಟ–287, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995)

ಮತ್ತೊಂದು ವರದಿಯಲ್ಲಿ ಹೀಗೆ ಬರುತ್ತದೆ: ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಉಹದ್ ಯುದ್ಧದ ಸಂದರ್ಭದಲ್ಲಿ ಮದೀನ ನಿವಾಸಿಯರ ಎಡೆಯಲ್ಲಿ, ಹಝ್ರತ್ ಪೈಗಂಬರ್(ಸ) ಶಹೀದ್ ಆದರು ಎಂಬ ವಾರ್ತೆ ಹರಡಿತ್ತು. ಈ ಸುದ್ದಿಯನ್ನು ಕೇಳಿ ಮದೀನದ ಜನರು ಅಳಲಾರಂಭಿಸಿದರು. ಆಗ ಅನ್ಸಾರಿನ ಒಬ್ಬಳು ಸ್ತ್ರೀ ಸಹ ಉಹದಿನ ಕಡೆಗೆ ಹೊರಟರು. ಮಾರ್ಗದಲ್ಲಿ ಅವರು ತನ್ನ ತಂದೆ, ಮಗ, ಗಂಡ ಮತ್ತು ಸಹೋದರನ ಮೃತದೇಹಗಳನ್ನು ಕಂಡರು. ಮೊಟ್ಟಮೊದಲು ಯಾರನ್ನು ನೋಡಿದ್ದರು ಎಂದು ಗೊತ್ತಿಲ್ಲ ಎಂದು ವರದಿಗಾರ ಹೇಳುತ್ತಾರೆ. ಅವರಲ್ಲಿ ಯಾರದಾದರೂ ಮೃತದೇಹದ ಸಮೀಪದಿಂದ ಹಾದುಹೋಗುವಾಗ, ಅವರು ಇದು ಯಾರೆಂದು ಕೇಳುತ್ತಿದ್ದರು. ಇದು ನಿಮ್ಮ ತಂದೆ, ಇದು ನಿಮ್ಮ ಸಹೋದರ, ಇದು ನಿಮ್ಮ ಗಂಡ, ಇದು ನಿಮ್ಮ ಮಗ ಎಂದು ಜನರು ಹೇಳುತ್ತಿದ್ದರು. ಹಝ್ರತ್ ಪೈಗಂಬರರ(ಸ) ಕ್ಷೇಮದ ಬಗ್ಗೆ ಅವರು ಕೇಳಿದರು. ಅವರು ನಿಮ್ಮ ಮುಂದಿರುವರು. ಹೀಗೆ ಅವರು ಹಝ್ರತ್ ಪೈಗಂಬರರ ಸನ್ನಿಧಿಯಲ್ಲಿ ಹಾಜರಾದರು. ಹಝ್ರತ್ ಪೈಗಂಬರರ ಬಟ್ಟೆಯ ಸೆರಗನ್ನು ಹಿಡಿದುಕೊಂಡು ಅವರು ಹೇಳಿದರು: ಯಾ ರಸೂಲಲ್ಲಾಹ್, ನನ್ನ ತಂದೆ ತಾಯಿ ನಿಮ್ಮ ಮೇಲೆ ಅರ್ಪಣವಾಗಲಿ. ನೀವು ಕ್ಷೇಮವಾಗಿದ್ದೀರಿ ಎಂದಾದರೆ, ನನಗೆ ಯಾರ ಮರಣದ ಬಗ್ಗೆಯೂ ಯಾವುದೇ ಪರಿವೆಯಿಲ್ಲ. (ಮಜ್‌ಮಉಝ್ಝವಾಎದ್ ಭಾಗ–6, ಪುಟ–120, ಕಿತಾಬುಲ್ ಮಗಾಝಿ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಖ಼ಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ತಮ್ಮ ಖ಼ಿಲಾಫತಿಗಿಂತ ಎರಡು ಮೂರು ವರ್ಷಗಳ ಹಿಂದೆ, ಹಝ್ರತ್ ಪೈಗಂಬರರ ಜೀವಿತ ಮತ್ತು ಯುದ್ಧಗಳ ಬಗ್ಗೆ ಜಲ್ಸ ಸಾಲಾನದಲ್ಲಿ ಭಾಷಣ ಮಾಡುತ್ತಿದ್ದರು. ಆಗ ಅವರು ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್‌ರ ಬಗ್ಗೆ ಹೇಳಿದ್ದರು. ಅದನ್ನು ನಾನು ಓದಿ ಹೇಳುತ್ತೇನೆ. ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್‌ರ ಸಹೋದರಿ, ಎಂದರೆ, ಹಝ್ರತ್ ಅಮ್ರ್ ಬಿನ್ ಜಮೂಹ್‌ರ ಪತ್ನಿ ಸಹ ಅವರ ಸಹೋದರನ ಹಾಗೆಯೇ ಹಝ್ರತ್ ಪೈಗಂಬರರನ್ನು ಅಪಾರವಾಗಿ ಪ್ರೀತಿಸುತ್ತಿದ್ದರು. ಅವರ ಗಂಡ ಆ ಯುದ್ಧದಲ್ಲಿ ಶಹೀದ್ ಆದರು, ಅವರ ಸಹೋದರ ಈ ಯುದ್ಧದಲ್ಲಿ ಶಹೀದ್ ಆದರು. ಅವರ ಮಗನು ಈ ಯುದ್ಧದಲ್ಲಿ ಶಹೀದ್ ಆದರು. ಆದರೆ ಹಝ್ರತ್ ಪೈಗಂಬರ್(ಸ) ಕ್ಷೇಮವಾಗಿದ್ದಾರೆ ಎಂಬ ಸಂತೋಷ ವಾರ್ತೆ ಈ ಎಲ್ಲ ದುಃಖದ ಮೇಲೆ ಮೇಲುಗೈ ಸಾಧಿಸಿತು. ಹಝ್ರತ್ ಆಯಿಶಾ ಸಿದ್ದೀಖ ವರದಿ ಮಾಡುತ್ತಾರೆ: ನಾನು ಯುದ್ಧ ಮೈದಾನದ ಕಡೆಗೆ ಸ್ಥಿತಿಗತಿಗಳನ್ನು ಅರಿಯಲು ಹೋಗುತ್ತಿದ್ದೆ. ಮಾರ್ಗ ಮಧ್ಯೆ ನಾನು ಅಮ್ರ್ ಬಿನ್ ಜಮೂಹ್‌ರ ಪತ್ನಿಯಾದ ಹಿಂದ್‌ನನ್ನು ಭೇಟಿಯಾದೆ. ಅವರು ಒಂಟೆಯ ಲಗಾಮು ಹಿಡಿದುಕೊಂಡು ಮದೀನದಕ ಕಡೆಗೆ ಹೋಗುತ್ತಿದ್ದರು. ಯುದ್ಧ ಮೈದಾನದ ಸ್ಥಿತಿಯೇನೆಂದು ನಾನು ಅವರೊಡನೆ ಕೇಳಿದೆ. ಅಲ್‌ಹಮ್ದುಲಿಲ್ಲಾಹ್, ಎಲ್ಲವೂ ಕ್ಷೇಮವಾಗಿವೆ ಎಂದು ಅವರು ಹೇಳಿದರು. ಹಝ್ರತ್ ಪೈಗಂಬರ್(ಸ) ಸಹ ಕ್ಷೇಮವಾಗಿದ್ದಾರೆ. ಅಷ್ಟರಲ್ಲಿ ನನ್ನ ದೃಷ್ಟಿ ಒಂಟೆಯ ಮೇಲೆ ಹೋಯಿತು. ಅದರ ಮೇಲೆ ಏನೋ ಇರುವುದಾಗಿ ಕಂಡುಬಂತು. ಈ ಒಂಟೆಯ ಮೇಲೆ ಏನದೆ ಎಂದು ನಾನು ಕೇಳಿದೆ. ಇವು ನನ್ನ ಗಂಡರಾದ ಅಮ್ರ್ ಬಿನ್ ಜಮೂಹ್‌ರ, ನನ್ನ ಸಹೋದರರಾದ ಅಬ್ದುಲ್ಲಾಹ್ ಬಿನ್ ಅಮ್ರ್ ಮತ್ತು ನನ್ನ ಮಗನಾದ ಖ಼ಲ್ಲಾದ್‌ರ ಮೃತದೇಹವಾಗಿದೆ. ಹೀಗೆ ಹೇಳುತ್ತಾ ಅವರು ಮದೀನದ ಕಡೆಗೆ ಹೋಗಲು ತಯಾರಾದರು. ಆದರೆ ಒಂಟೆ ಕುಳಿತುಕೊಂಡಿತು. ಯಾವುದೇ ರೀತಿಯಲ್ಲಿ ನಿಲ್ಲಲ್ಲು ತಯಾರಾಗಲಿಲ್ಲ. ಕೊನೆಗೆ ಎದ್ದು ನಿಂತರೂ, ಮದೀನದ ದಿಕ್ಕಿಗೆ ಹೋಗಲು ತಯಾರಾಗಲಿಲ್ಲ. ಆಗ ಆ ಸ್ತ್ರೀ ಒಂಟೆಯ ಲಗಾಮನ್ನು ಉಹದ್ ಮೈದಾನದ ದಿಕ್ಕಿಗೆ ತಿರುಗಿಸಿದರು. ಆಗ ಅದು ಖುಶಿಯಿಂದ ನಡೆಯಲು ತೊಡಗಿತು. ಇಲ್ಲಿ ಈ ಘಟನೆಗಳು

ನಡೆಯುತ್ತಿದ್ದುವು. ಹಝ್ರತ್ ಪೈಗಂಬರರೊಡನೆ ಪ್ರೀತಿ ಮತ್ತು ಪ್ರೇಮದ ವೃತ್ತಾಂತ. ಮತ್ತೊಂದೆಡೆ ಹಝ್ರತ್ ಪೈಗಂಬರ್(ಸ) ಸಹಾಬರೊಡನೆ ಹೀಗೆ ಹೇಳುತ್ತಿದ್ದರು: ಹೋಗಿರಿ, ಅಮ್ರ್ ಬಿನ್ ಜಮೂಹ್ ಮತ್ತು ಅಬ್ದುಲ್ಲಾಹ್ ಬಿನ್ ಅಮ್ರ್‌ರ ಮೃತದೇಹವನ್ನು ಹುಡುಕಿ ತನ್ನಿರಿ. ಅವರನ್ನು ಒಟ್ಟಿಗೆ ದಫನ್ ಮಾಡಲಾಗುವುದು. ಏಕೆಂದರೆ, ಅವರಿಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರು.

ಹಝ್ರತ್ ಪೈಗಂಬರರಿಗೂ ಅವರ ಮೇಲೆ ತುಂಬ ಗಮನ ಮತ್ತು ಪ್ರೀತಿಯಿತ್ತು. ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ ಉಹದ್ ಯುದ್ಧಕ್ಕಾಗಿ ಹೊರಡಲು ಉದ್ದೇಶಿಸಿದಾಗ, ತನ್ನ ಮಗನಾದ ಹಝ್ರತ್ ಜಾಬಿರ್‌ರನ್ನು ಕರೆದು ಹೀಗೆ ಹೇಳಿದರು: ಹೇ ನನ್ನ ಪುತ್ರಾ, ನಾನು ಶಹೀದ್ ಆಗುವವರಲ್ಲಿ ಮೊದಲಿಗನಾಗುವನು ಎಂದು ತೋರುತ್ತದೆ. ನಾನು ನನ್ನ ಹಿಂದೆ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ನನಗೆ ಅತ್ಯಂತ ಪ್ರಿಯನಾದ ನಿನ್ನನ್ನು ಬಿಟ್ಟುಹೋಗುತ್ತಿದ್ದೇನೆ. ನನಗೆ ಕೆಲವು ಸಾಲಗಳಿವೆ. ನನ್ನ ಈ ಸಾಲಗಳನ್ನು ನನ್ನ ಪರವಾಗಿ ತೀರಿಸು. ನೀನು ನಿನ್ನ ಸಹೋದರಿಯರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಬೇಕೆಂದು ನಾನು ಉಪದೇಶಿಸುತ್ತೇನೆ. ಹಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ: ಮುಂದಿನ ಬೆಳಿಗ್ಗೆ ನನ್ನ ತಂದೆ ಎಲ್ಲರಿಗಿಂತ ಮುಂಚೆ ಶಹೀದ್ ಆದರು. ಶತ್ರುಗಳು ಅವರ ಮೂಗು ಮತ್ತು ಕಿವಿಗಳನ್ನು ಕತ್ತರಿಸಿದ್ದರು. (ಅಸದುಲ್ ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–3, ಪುಟ–344, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಉಹದ್ ಯುದ್ಧದಲ್ಲಿ ಶಹೀದ್ ಆದವರನ್ನು ದಫನ್ ಮಾಡಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಬಂದಾಗ ಹೀಗೆ ಹೇಳಿದರು: ಅವರನ್ನು ಅವರ ಗಾಯಗಳ ಸಮೇತ ಕಫನ್ ಹೊದಿಸಿರಿ. ಏಕೆಂದರೆ ಅವರ ಮೇಲೆ ನಾನು ಸಾಕ್ಷಿಯಾಗಿದ್ದೇನೆ. ಅಲ್ಲಾಹನ ಮಾರ್ಗದಲ್ಲಿ ಗಾಯಗೊಂಡ ಪ್ರತಿಯೊಬ್ಬ ಮುಸ್ಲಿಮನು ಖಿಯಾಮತ್ ದಿನದಂದು ಬರುವಾಗ, ಅವನ ರಕ್ತ ಹರಿಯುತ್ತಿರುವುದು, ಅದರ ಬಣ್ಣ ಕುಂಕುಮ ಕೇಸರಿಯಾಗಿರುವುದು, ಅದರ ಸುವಾಸನೆ ಕಸ್ತೂರಿಯದ್ದಾಗಿರುವುದು. ಎಂದರೆ, ಇವರು ಅಲ್ಲಾಹನ ಮುಂದೆ ಹಾಜರಾಗುವ ಅವನ ಪ್ರಿಯ ಜನರಾಗಿರುವರು. ಅವರ ಸ್ನಾನ ಮಾಡಿಸುವ ಮತ್ತು ಅವರ ಕಫನ್ ಹೊದಿಸುವ ಆವಶ್ಯಕತೆಯಿಲ್ಲ. ಅವರು ಧರಿಸಿರುವ ಬಟ್ಟೆಯೇ ಅವರ ಕಫನ್ ಆಗಿರುವುದು.

ಹಝ್ರತ್ ಜಾಬಿರ್(ರ) ಹೇಳುತ್ತಾರೆ: ನನ್ನ ತಂದೆಗೆ ಒಂದು ಚಾದರದಿಂದ ಕಫನ್ ಮಾಡಿಸಲಾಗಿತ್ತು. ಶಹೀದರನ್ನು ದಫನ್ ಮಾಡುತ್ತಿದ್ದಾಗ, ಹಝ್ರತ್ ಪೈಗಂಬರ್(ಸ) ಕೇಳಿದರು: ಇವರಲ್ಲಿ ಪವಿತ್ರ ಖುರ್‌ಆನ್ ಹೆಚ್ಚು ತಿಳಿದಿದ್ದವರು ಯಾರು? ಯಾವುದಾದರೂ ಮೃತದೇಹದ ಕಡೆಗೆ ಬೊಟ್ಟು ಮಾಡಿ ತೋರಿಸಲಾಗುವಾಗ, ಹಝ್ರತ್ ಪೈಗಂಬರ್(ಸ) ಹೇಳುತ್ತಿದ್ದರು: ಇವರನ್ನು ಇತರರಿಗಿಂತ ಮುಂಚೆ ಗೋರಿಗೆ ಇಳಿಸಿರಿ. ಎಂದರೆ, ಪವಿತ್ರ ಖುರ್‌ಆನ್ ಹೆಚ್ಚು ತಿಳಿದವರನ್ನು ಅವರು ಮೊದಲು ದಫನ್ ಮಾಡಿಸುತ್ತಿದ್ದರು. ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ ಉಹದ್ ಯುದ್ಧದಂದು ಮೊತ್ತಮೊದಲು ಶಹೀದ್ ಆಗಿದ್ದರು ಎಂದು ಜನರು ಹೇಳುತ್ತಿದ್ದರು. ಎಂದರೆ ಮೊತ್ತಮೊದಲು ಶಹೀದ್ ಆದವರು ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ ಆಗಿದ್ದರು ಎಂಬ ಮಾತು ಸಹ ಜನರೆಡೆಯಲ್ಲಿ ಆ ಸಮಯದಲ್ಲಿ ನಡೆಯುತ್ತಿತ್ತು. ಸುಫ್‌ಯಾನ್ ಬಿನ್ ಅಬ್ದುಶ್ಶಮ್ಸ್ ಅವರನ್ನು ಶಹೀದ್ ಮಾಡಿದ್ದನು. ಹಝ್ರತ್ ಪೈಗಂಬರ್(ಸ) ಶತ್ರುಗಳ ಎರಡನೇ ಆಕ್ರಮಣಕ್ಕೆ ಮುಂಚಿತವಾಗಿ ಅವರ ಜನಾಝ ನಮಾಝ್ ನಿರ್ವಹಿಸಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಅಬ್ದುಲ್ಲಾಹ್ ಬಿನ್ ಅಮ್ರ್(ರ) ಮತ್ತು ಅಮ್ರ್ ಬಿನ್ ಜಮೂಹ್‌ರನ್ನು(ರ) ಒಂದೇ ಖಬರಿನಲ್ಲಿ ದಫನ್ ಮಾಡಿರಿ. ಏಕೆಂದರೆ, ಅವರ ಎಡೆಯಲ್ಲಿ ಪರಸ್ಪರ ವಿಶ್ವಾಸ ಮತ್ತು ಪ್ರೀತಿಯಿತ್ತು. ಎಂದರೆ, ಅವರಿಬ್ಬರೂ ಇಹಲೋಕದಲ್ಲಿ ಪರಸ್ಪರ ಪ್ರೀತಿಸುತ್ತಿದ್ದರು. ಆದ್ದರಿಂದ ಅವರಿಬ್ಬರನ್ನೂ ಒಂದೇ ಖಬರಿನಲ್ಲಿ ದಫನ್ ಮಾಡಬೇಕೆಂದು ಹೇಳಿದರು. ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ ಕೆಂಪು ಬಣ್ಣದ ಚರ್ಮಕಾಂತಿಯನ್ನು ಹೊಂದಿದ್ದರು. ಅವರ ತಲೆಯ ಮುಂದಿನ ಭಾಗದಲ್ಲಿ ಕೂದಲುಗಳಿದ್ದಿರಲಿಲ್ಲ. ಅವರು ಉದ್ದ ಮೈಕಟ್ಟಿನವರಾಗಿರಲಿಲ್ಲ. ಆದರೆ ಹಝ್ರತ್ ಅಮ್ರ್ ಬಿನ್ ಜಮೂಹ್ ಉದ್ದ ಮೈಕಟ್ಟಿನ ವ್ಯಕ್ತಿಯಾಗಿದ್ದರು.ಆದ್ದರಿಂದ ಇಬ್ಬರನ್ನು ಗುರುತಿಸಲು ಸಾಧ್ಯವಾಯಿತು.ಇಬ್ಬರನ್ನೂ ಒಂದೇ ಖಬರಿನಲ್ಲಿ ದಫನ್ ಮಾಡಲಾಯಿತು. (ಅತ್ತಬಖಾತುಲ್ ಕುಬ್ರ ಭಾಗ–3, ಪುಟ–424, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2012)

ಇದರ ಉಳಿದ ಭಾಗವನ್ನು ಮುಂದಿನ ಬಾರಿ ಪ್ರಸ್ತಾಪಿಸುವೆನು.

************************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ನೋಡಿರಿ. ಎಷ್ಟು ಸಣ್ಣ ವಿಷಯವಾಗಿದೆ. ಆದರೆ ಇದು ಅಲ್ಲಾಹನ ಪ್ರಕೋಪಕ್ಕೆ ಕಾರಣವಾಯಿತು. ಅದಕ್ಕೆ ಕಾರಣವೆಂದರೆ ಮನುಷ್ಯನು ಸಜ್ಜನಿಕೆಯಿಂದ ಮಾತ್ರ ಸತ್ಕರ್ಮಗಳಲ್ಲಿ ಪ್ರಗತಿ ಸಾಧಿಸಬಹುದು. ಮನುಷ್ಯನು ಎಷ್ಟೇ ಆರಾಧನೆಗಳನ್ನು ಮಾಡಲಿ ಎಷ್ಟೇ ಸಾಮುದಾಯಿಕ ಸೇವೆ ಮಾಡಲಿ. ಆದರೆ ಅವನಲ್ಲಿ ಸಜ್ಜನಿಕೆಯಿಲ್ಲದಿದ್ದರೆ ಅವನು ಎಂದೂ ಆಧ್ಯಾತ್ಮಿಕ ಪ್ರಗತಿ ಸಾಧಿಸಲಾರನು. ಅಲ್ಲದೇ ಸಮುದಾಯದ ಹಿತಚಿಂತಕನಾಗಲಾರನು. ಬದಲು ಇಂತಹ ಅಸಭ್ಯರು ಸಮುದಾಯವನ್ನು ಸಹ ಕೆಲವೊಮ್ಮೆ ವಿನಾಶದ ಅಂಚಿಗೆ ತಳ್ಳುವವರಾಗುತ್ತಾರೆ. ನೋಡಲಿಕ್ಕೆ ಹಿತ್ತತುಲ್ ಅನ್ನು ಹಿಂತತುನ್ ಎಂದು ಹೇಳುವುದು ಒಂದು ಸಾಧಾರಣ ಮಾತು ಎಂದು ಕಂಡುಬರುತ್ತದೆ ಆದರೆ ಗಂಭೀರವಾಗಿ ಆಲೋಚಿಸಿದರೆ ಅದು ಅತ್ಯಂತ ಪ್ರಮುಖ ಮಾತಾಗಿರುತ್ತದೆ. ಏಕೆಂದರೆ ಅಲ್ಲಾಹನ ಮಾತಿನೊಂದಿಗೆ ಅಪಹಾಸ್ಯ ಮಾಡುತ್ತಿದ್ದಾರೆ. ಇಂತಹ ಅಪಹಾಸ್ಯವು ಅಸಭ್ಯರಿಂದ ಮಾತ್ರ ಸಾಧ್ಯ. ಯಾರ ಹೃದಯದಲ್ಲಿ ಸಭ್ಯ ಭಾವನೆಗಳಿಲ್ಲವೋ ಅವನು ಧರ್ಮಕ್ಕಾಗಲಿ, ಇಹ ಜೀವನವಾಗಲಿ ಉಪಯುಕ್ತವಾಗಲು ಸಾಧ್ಯವಿಲ್ಲ. ಸಣ್ಣ ಸಣ್ಣ ಉತ್ತೇಜಕ ಸಂದರ್ಭಗಳಲ್ಲಿ ಇಂತಹ ಜನರು ತಮ್ಮ ಸ್ವಹಿತಕ್ಕಾಗಿ ಜನರನ್ನು ಸಮುದಾಯವನ್ನು ದೇಶವನ್ನು ದಂಗೆ ಏಳುವಂತೆ ಮಾಡಬಲ್ಲರು. ಇಂದು ಮುಸಲ್ಮಾನರ ದೆಸೆ ಹೀಗೆ ಆಗಿದೆ. ಅಧರ್ಮಿಯರಂತೂ ಅಧರ್ಮಿಯರೇ ಆದರೆ ತನ್ನನ್ನು ಧಾರ್ಮಿಕ ಮುಖಂಡರೆಂದು ಕರೆಯಿಸಿಕೊಳ್ಳುವವರು ಸಹ ಧಾರ್ಮಿಕ ವಿಷಯಗಳಲ್ಲಿ ಅಪಹಾಸ್ಯ ಮಾಡುತ್ತಾರೆ. ಸಂದರ್ಭವಿಲ್ಲದೇ ಖುರ್‌ಆನ್‌ನ ವಚನವನ್ನು ಓದುವರು. ಅಪಹಾಸ್ಯ ಮಾಡುವರು, ಅಲ್ಲಿ ಹದೀಸುಗಳು ಸಹ ಉಚ್ಛರಿಸುವವರು. ಆದರೆ ಅಲ್ಲಾಹ್ ಮತ್ತು ಅವನ ಪ್ರವಾದಿಯ ಘನತೆಯನ್ನು ಲೆಕ್ಕಿಸುವುದಿಲ್ಲ. ಇಂತಹ ಪ್ರವೃತ್ತಿಯೂ ಹೃದಯವನ್ನು ಕಠಿಣಗೊಳಿಸುತ್ತದೆ. ಆಧ್ಯಾತ್ಮಿಕತೆಯನ್ನು ನಾಶಗೊಳಿಸುತ್ತದೆ. ಮತ್ತು ದೇವಭಯವನ್ನು ಮರೆಯಾಚಿಸುತ್ತದೆ. ಇಂತಹ ಪಾಪಗಳನ್ನು ಮಾಡಲು ಹೆಚ್ಚು ಶ್ರಮ ಸಹ ಪಡುವ ಅವಶ್ಯಕತೆ ಇರುವುದಿಲ್ಲ. ಯಾವುದೇ ಆಮಿಷವನ್ನು ಸಹ ಕೊಡುವ ಇಲ್ಲಿ ಪ್ರಶ್ನೆ ಬರುವುದಿಲ್ಲ. ಒಂದು ಸಣ್ಣ ರೀತಿಯ ಲಕ್ಷ್ಯ ವಹಿಸಿದರೆ ಸಾಕು. ಯಾರಲ್ಲಿ ಈ ರೋಗವಿರುತ್ತದೆಯೋ ಅವರು ಒಂದಿಷ್ಟು ಲಕ್ಷ್ಯ ವಹಿಸಿದರೂ ಸಾಕು ಈ ಕೊರತೆಯನ್ನು ನೀಗಿಸಿಕೊಳ್ಳಬಹುದು. ಒಂದಿಷ್ಟು ಶ್ರಮ ವಹಿಸಿದರೆ ಸುದಾರಣೆ ಮಾಡಿಕೊಳ್ಳಬಹುದು ಮತ್ತು ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಬಹುದಾಗಿದೆ.

ಆದುದರಿಂದ ಅಲ್ಲಾಹನ ಮತ್ತು ಅವನ ಪ್ರವಾದಿಗಳ ವಿಷಯಗಳಲ್ಲಿ ಅಪಹಾಸ್ಯದ ಪ್ರವೃತ್ತಿಯನ್ನು ಬಿಟ್ಟುಬಿಡಿರಿ. ಈ ಪಾಪವು ಫಲಪ್ರದವಾಗಿರುವುದಿಲ್ಲ. ಮಾನವನ ಹೃದಯವನ್ನು ಸಾಯಿಸುತ್ತದೆ. ಅಲ್ಲಾಹನ ಮತ್ತು ಅವನ ಪ್ರವಾದಿಯ ಸ್ಮರಣೆ ಬಂದಾಗಲೆಲ್ಲ ನಮ್ಮ ಹೃದಯದಲ್ಲಿ ಭಯ ಉಂಟಾಗಬೇಕಾಗಿದೆ. ಅದರಿಂದ ಪ್ರೀತಿ ಉಂಟಾಗುತ್ತದೆ. ಅವನ ಸ್ಮರಣೆಯು ಗಮನಿಸದಿರಲು ಸಾಧ್ಯವಿಲ್ಲ. ತಮ್ಮ ಹೆತ್ತವರೊಡನೆ ಯಾರಾದರೂ ಅಪಹಾಸ್ಯ ಮಾಡಬಲ್ಲನೆ. ಹೀಗಿರುವಾಗ ಅಲ್ಲಾಹ್ ಮತ್ತು ಅವನ ಪ್ರವಾದಿಗಳ ವಿಷಯದಲ್ಲಿ ಅಪಹಾಸ್ಯ ವಿಷಯದಲ್ಲಿ ಒಂದು ಕ್ಷಣಕ್ಕಾದರೂ ಈ ರೀತಿ ಮಾಡುವ ಅಪಹಾಸ್ಯವು ಜೀವನ ಪರ್ಯಂತ ಮಾಡಿದ ಆರಾಧನೆಗಳನ್ನು ವ್ಯರ್ಥಗೊಳಿಸುವುದು.**“ಅಲ್ ಹಝುರ್ ಸುಮ್ಮಲ್ ಹಝುರ”**
(ತಫ್ಸೀರ್ ಕಬೀರ್ ಸಂಪುಟ 1, ಪುಟ 469–470 ಮದ್ರಣ ಖಾದಿಯಾನ್ 2010)

**Love for All, Hatred for None**
**ಪ್ರೀತಿ ಯಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

**ಸೂಚನೆ**

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.
**email: www.kannadabadar@gmail.com**
**Mob or whatsapp: 8050330779**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಎಲ್ಲಿಂದ ಪಡೆಯುವುದು, Emergency ಪಡೆಯಲು ಯಾವುದಾದರೂ ಬೇರೆ source ಅಗತ್ಯವಿಲ್ಲವೆ, ರಷ್ಯಾದಿಂದ ಯುದ್ಧ ಮಾಡಿ ಆಯಿತು. ಅಲ್ಲಿಂದ 40% oil ಪಡೆಯುತ್ತಿದ್ದರು. ಬಾಕಿ ಇದು ಸಹ ಇಲ್ಲ ಎಂದಾದರೆ ಏನು ಉಳಿಯುವುದು, ದೀಪ ಮೇಣದ ಬತ್ತಿ ಉರಿಸುವರೆ, ಗಾಳಿಯಲ್ಲಿ ಅಂತು ಹೋಗಲು ಸಾಧ್ಯವಿಲ್ಲ. ತುಂಬ ಕಷ್ಟವಿದೆ. ತುಂಬ ದುಬಾರಿ ಇದೆ.

ಒಬ್ಬ ವಿದ್ಯಾರ್ಥಿ ಪ್ರಶ್ನೆ ಕೇಳಿದನು. Nuclear Tubes ಗಳನ್ನು ಉಪಯೋಗಿಸಿದ ನಂತರ ನೀರಿನಲ್ಲಿ ಹಾಕಿ ತಂಪುಗೊಳಿಸುತ್ತಾರೆ. ನನ್ನ ಪ್ರಶ್ನೆ ಎಂದರೆ ಆಗ Tubes ಗಳ ಉಷ್ಣಾಂಶ ಎಷ್ಟಿರುತ್ತದೆ ಮತ್ತು ನೀರಿನ ಉಷ್ಣಾಂಶ ಎಷ್ಟಿರುತ್ತದೆ, ಆ ನೀರು ಎಷ್ಟು ಸಮಯದವರೆಗೆ ಆ Rays ಗಳನ್ನು ತಡೆಯಬಹುದು. ನಾವು ಎಷ್ಟು ಸಮಯ ಆ Tubes ಗಳನ್ನು ಇಡಬಹುದು?

ಆಗ ಹುಝೂರ್ ಹೇಳಿದರು. ಮತ್ತು ಆ ನೀರು ಎಲ್ಲಿಗೆ ಹೋಗುತ್ತದೆ.

ಝುಹೀರ್ ಸಾಹಿಬ್ ಹೇಳಿದರು. ಅದರ ಮಿಂಚು ಹತ್ತು ಸಾವಿರ Rem ಪ್ರತಿ ಗಂಟೆಯಿರುತ್ತದೆ. ಕನಿಷ್ಠ ಮಟ್ಟ ಅದರ ಚಲನೆ ಒಂಭತ್ತು ತಿಂಗಳಿನಷ್ಟು ಇರುತ್ತದೆ ಎಂದು ಹೇಳಲಾಗಿದೆ. ಕನಿಷ್ಠ ಮಟ್ಟ 9 ತಿಂಗಳವರೆಗೆ ನೀವು ಅದನ್ನು ಅವಶ್ಯವಾಗಿ ನೀರಿನಲ್ಲಿ ಇಡಬೇಕಾಗುತ್ತದೆ.

ಹುಝೂರ್ ಹೇಳಿದರು. ಯಾವ ನೀರಿನಲ್ಲಿ ಅದನ್ನು ಇಡಲಾಗಿರುತ್ತದೆ. ಅದು ಒಂದು ಅವಧಿಯ ನಂತರ ಅದರ ಪ್ರಭಾವದಿಂದ ಮುಕ್ತವಾಗಿ, ನೀರು ಶುದ್ಧವಾಗುವುದು.

ಆಗ ಝುಹೀರ್ ಸಾಹಿಬ್ ಹೇಳಿದರು. ಅದರೊಳಗೆ ಅವರು ಇನ್ನು purification plant ಹಚ್ಚಿದ್ದರೆ. ಹುಝೂರ್ ಕೇಳಿದರು. ಈ plant ಗಳನ್ನು ಹಚ್ಚುತ್ತಾರೆ. ಆ ನೀರು circulate ಆಗುತ್ತದೆ. ಅದೇ Emergency ಯಿಂದ Freezing plant ನಡೆಯುತ್ತಿರುತ್ತದೆ. ಅದೇ ನೀರನ್ನು circulate ಗೊಳಿಸಿ ಮತ್ತೆ ಅದೇ point ಮೇಲೆ ಬರುತ್ತದೆ. ಹೊಸ ನೀರನ್ನು ಕಲುಷಿತಗೊಳಿಸುವುದಿಲ್ಲ.

ಹುಝೂರ್ ಹೇಳಿದರು. ಆ ನೀರು ಒಂದು ವಿಶೇಷ ಮಟ್ಟಿಗೆ Reactive ಆಗುತ್ತದೆ. ಮತ್ತೆ ಅದು waste ಆಗುತ್ತದೆ. ಮತ್ತೆ ಆ ನೀರನ್ನು ಗಾಜಿನ ಜೊತೆಯಲ್ಲಿ ಕರಗಿಸಿ solid ಮಾಡುತ್ತಾರೆ. ಮತ್ತೆ ಅದನ್ನು ಸಹ dump ಮಾಡಬೇಕಾಗುತ್ತದೆ.

ಹುಝೂರ್ ಹೇಳಿದರು. ಈ Process ನಡೆಯುತ್ತದೆ. ಅದು solid ಆಗುತ್ತದೆ. ಅದರ Fumes ಹಾಕಿ ಹೋಗುತ್ತದೆ. Waste ಅನ್ನು solid ಮಾಡುತ್ತಾರೆ. ಅದರ ಆವಿ ಎಲ್ಲಾ ಹೊಗುತ್ತದೆ. ಗಾಳಿಯಲ್ಲಿ ಆರಿ ಹೋಗುತ್ತದೆ. ಗಾಳಿಯನ್ನು Reactivity ಮಾಡುವುದಿಲ್ಲವೆ?

ಆಗ ಝುಹೀರ್ ಸಾಹಿಬ್ ಹೇಳಿದರು. ರಿಯಾಕ್ಟರ್ ಇದೆ ಅಲ್ವಾ, ಅದರೊಳಗೆಯೂ Protection ಇರುತ್ತದೆ.

ಹುಝೂರ್ ಹೇಳಿದರು. steem (ಆವಿ) ಯಿಂದ Airolution (ವಾಯುಮಾಲಿನ್ಯ ಆಗುವುದಿಲ್ಲವೇ?

ಆಗ ಝುಹೀರ್ ಸಾಹಿಬ್ ಹೇಳಿದರು. ಆ Water pools ಮೇಲಿಂದ ಮುಚ್ಚಿರುತ್ತವೆ. ಅದರ 40 ಫೀಟ್ ಒಳಗೆ consisters ಇಡಲಾಗುತ್ತದೆ. ಅದರಿಂದ ಸಾಧ್ಯವಿರುವುದಿಲ್ಲ.

ಹುಝೂರ್ ಹೇಳಿದರು. ಅದರ ಅರ್ಥ steem ಅಲ್ಲಿ ಅದು ಒಂದೇ ಸಮಯಕ್ಕೆ ತಂಪಾಗುತ್ತದೆ? ಮತ್ತು ನೀರಾಗುವುದು? ಮತ್ತೆ ಮರಳಿ consisters ನಲ್ಲಿ ಬರುವುದು? ಆ Radiation Free ಆಗುವುದು?

ಹುಝೂರ್ ಹೇಳಿದರು. ಇಷ್ಟೆಲ್ಲ process ನಡೆಯುವಾಗ ಒಂದು ಸಮಯ ಬರುವುದು ಅದು saturate ಆಗುವುದು. ಆಗ ನೀರನ್ನು waste ರೂಪದಲ್ಲಿ ಇನ್ನೊಂದೆಡೆ dump ಮಾಡುವುದು?

ಆಗ ಅವರು ಹೇಳಿದರು. ಈ ನೀರು Radiactivity ನಿಂದ Saturate ಆದ ಮೇಲೆ ಅದೇ process ಜಾರಿಗೆ ತರುತ್ತದೆ. ಅಂದರೆ ಗಾಜಿನ ಜೊತೆಯಲ್ಲಿ melt ಮಾಡುತ್ತಾರೆ. ಮತ್ತೆ ಅದನ್ನು solidity ಮಾಡಿ, ಮತ್ತು ಅದನ್ನು dump ಮಾಡುತ್ತಾರೆ.

ಹುಝೂರ್ ಹೇಳಿದರು. ಆ ನೀರು 100% ಅಂತೂ solidity ಆಗುವುದಿಲ್ಲ. ಸ್ವಲ್ಪವಾದರೂ ಆವಿಯಾಗುವುದು? ಆದರೆ ಇದು ಸಹ Long process ಆಗಿದೆ. ಇನ್ನೊಂದು ಸಂಕಟ ಮೈಮೇಲೆ ಬಂತು. ಹೀಗಾಗಿ ಮನುಷ್ಯನು ತನ್ನ ಹಿತಕ್ಕಾಗಿ ಸಂಕಟ ಮೈಮೇಲೆ ಎಳೆದು ಹಾಕುವ ಹೊರತು ಇನ್ನೇನು ಮಾಡಲಿಲ್ಲ. ಆಗಲಿ ನೀವು ಮಾನವೀಯ ಸೇವೆಗೋಸ್ಕರ ಏನಾದರೂ ಮಾಡುತ್ತಿದ್ದೀರಿ. ಅದನ್ನು ಕೊನೆಗೊಳಿಸುವುದು ಸಹ ಮಾನವ ಸೇವೆ ಆಗಿದೆ. ನೀವು ತಯಾರಿಸುವ ಬದಲು ಅದನ್ನು ಸಂರಕ್ಷಿಸಲು ಸಂಶೋಧನೆ ಮಾಡುತ್ತಿದ್ದೀರಿ, ಒಳ್ಳೆಯದ್ದಾಗಿದೆ.

ಒಬ್ಬ ವಿದ್ಯಾರ್ಥಿ ಪ್ರಶ್ನೆ ಮಾಡಿದನು. ಉಪಯೋಗ ಮಾಡಿ ತೆಗೆದ ನಂತರ Rods ಗಳ ಉಷ್ಣಾಂಶ ಏನಿರುತ್ತದೆ ಮತ್ತು interim storage ಒಳಗೆ ನೀರಿನ ಉಷ್ಣಾಂಶ ಏನಿರುತ್ತದೆ?

ಝುಹೀರ್ ಸಾಹಿಬ್ ಹೇಳಿದರು. 3000 ಮೆಗಾವಾಟ್ ಪ್ರತಿ ಮೀಟರ್ ಕ್ಯೂಬ್ ಅದರ thermal cut put ಆಗಿರುತ್ತದೆ.

ಆಗ ಹುಝೂರ್ ಹೇಳಿದರು ಅದನ್ನು ಉಪಯೋಗಿಸಬಹುದಲ್ಲ. ಅಷ್ಟೊಂದು Thormal Mega Power ಲಭಿಸುವುದಾದರೆ ಅದನ್ನು emergency ನಲ್ಲಿ ಪರಿವರ್ತಿಸಿರಿ. ಆ waste ಯಿಂದಲೂ ಪ್ರಯೋಜನ ಪಡೆಯಬಹುದು. ಆ waste ಅನ್ನು ಮರಳಿ ಉಪಯೋಗಿಸಲು ಆಗುವುದಿಲ್ಲ. ಅಷ್ಟೊಂದು ಮೇಗವ್ಯಾಟ್ ವಿದ್ಯುತ್ ಉತ್ಪಾದಿಸುವುದಾದರೆ ಇಡೀ ಲೋಕಕ್ಕೆ ಬೆಳಗಿಸಬಹುದು. ಅಥವಾ ಕೇವಲ Emergy ಆಗಿದೆಯೇ, ಅದರಿಂದ ಪ್ರಯೋಜನ ಪಡೆಯಲು ಆಗುವುದಿಲ್ಲವೇ?

ಅದಕ್ಕೆ ಉತ್ತರಿಸಲಾಯಿತು. ಅದರ ಜೊತೆಯಲ್ಲಿ ಮಿಂಚು ಸಹ ಇದು ನಮಗೆ ಆ ಮಿಂಚು ಸಹ handle ಮಾಡಬೇಕಾಗುತ್ತದೆ. ಹೀಗಾಗಿ ಅದು ಕಷ್ಟಸಾಧ್ಯ.

ಹುಝೂರ್ ಕೇಳಿದ ಮಾತಿಗೆ ವಿದ್ಯಾರ್ಥಿ ಹೇಳಿದನು. ಪಾಕಿಸ್ತಾನದಿಂದ Bachelor ಮಾಡಿದ್ದೆ. ಮತ್ತೆ ಇಲ್ಲಿಂದ master ಮಾಡಿದ್ದೇನೆ.

ಒಬ್ಬ ವಿದ್ಯಾರ್ಥಿ ಪ್ರಶ್ನೆ ಕೇಳಿದನು. ಉಷ್ಣಾಂಶ ತೋರಿಸುವಂತಹ ಯಂತ್ರವಿಲ್ಲವೇ?

ಆಗ ಹುಝೂರ್ ಹೇಳಿದರು. ನಿಮ್ಮ Temperature gage ಎಷ್ಟರವಟ್ಟಿಗೆ ತೋರಿಸಬಹುದು, ಅದರ ನಂತರ infinity ಪ್ರಕಟವಾಗತೊಡಗುತ್ತದೆ. ಈ Temperature ನ infinity ತೋರಿಸುವಂತಹ ಯಾವುದಾದರೂ Material ಇದೆಯೇ.

ಆಗ ಉತ್ತರಿಸಿದರು. ಇತ್ತೀಚೆಗೆ ಸ್ವಯಂ Radiation Temperature measure ಮಾಡುವ ಒಂದು Technic ಉಪಯೋಗಿಸುತ್ತಿದ್ದಾರೆ?

ಹುಝೂರ್ ಹೇಳಿದರು. ಹಾಗಾದರೆ ಸರಿ, ಆಗಬಹುದು. ಅದು ಎಲ್ಲಿಯತನಕ ನಡೆಯುವುದು. Paise to the power 10, 20 ತೋರಿಸಬಹುದು, ಮತ್ತೆ ಏನು ಪ್ರಯೋಜನ.

ಆಮಿರ್ ಸಾಹಿಬ್ ಜರ್ಮನಿ ಪ್ರಶ್ನೆ ಕೇಳಿದರು.

ಮುಂದಿನ 15 ವರ್ಷಗಳಲ್ಲಿ ಎಲ್ಲ Atomic planat ಬಂದ್ ಮಾಡಲಾಗುವುದು. ಮತ್ತು ಅದರಿಂದ ವಿದ್ಯುತ್ ಉತ್ಪಾದಿಸಲಾಗುವುದಿಲ್ಲ ಎಂಬ ಜರ್ಮನ್ ಸರಕಾರದ ನಿಲುವು ಪ್ರಶಂಸನೀಯವಾಗಿದೆಯೇ?

ಹುಝೂರ್ ಹೇಳಿದರು. ಅವರು ಪ್ರಶಂಸೆ ಮಾಡಲಿ ಬಿಡಲಿ, ನಾನು ಪ್ರಶಂಸೆ ಮಾಡುತ್ತೇನೆ. ತುಂಬ ಸಮಯ ಹಿಡಿಯಬಹುದು, ಬಹುಶಃ ಕೆಲವು ಪೀಳಿಗೆಗಳ ನಂತರ ಇದು ಸಾಧ್ಯವಾಗಬಹುದು.

ಪ್ರಶ್ನೆ ಕೇಳುವ ಒಬ್ಬ ವಿದ್ಯಾರ್ಥಿ ಹೇಳಿದನು. ನೀವು ಬಯಸಿದ ಪರಿಣಾಮ ಲಭಿಸಲಿಲ್ಲವಾದರೆ ನಿಮ್ಮ ಸಂಶೋಧನೆಯ ಫಲ ಏನು?

ಆಗ ಝುಹೀರ್ ಸಾಹಿಬ್ ಹೇಳಿದರು. ಪ್ರತಿಯೊಂದು Research ನಿಂದ ಏನಾದರೂ ಕಲಿಯಲು ಸಾಧ್ಯವಾಗುತ್ತದೆ. ಹೊಸ ಮಾರ್ಗಗಳು ನಮ್ಮ ಮುಂದೆ ತೆರೆದುಕೊಳ್ಳುತ್ತದೆ. ನಾನು ಇಂತಹದೊಂದು Software ಉಪಯೋಗಿಸುತ್ತ ಇದ್ದೇನೆ. ಅದು ಈ ಹಿಂದೆ ನಾನು ಉಪಯೋಗಿಸಿರಲಿಲ್ಲ. ಅದನ್ನು ಇನ್ನೊಂದು material ನಲ್ಲಿ ಉಪಯೋಗ ಮಾಡಬಹುದು. ಆದುದರಿಂದ ಯಾವತ್ತೂ ಅದರ ಉಪಯೋಗವಿರುತ್ತದೆ.

ಹುಝೂರ್ ಹೇಳಿದರು. Research ಅರ್ಥವೇನು. ನೀವು ಅಂತಿಮ ಪರಿಣಾಮಕ್ಕೆ ತಲುಪಿದ್ದೀರಿ ಎಂದಾದರೆ ಅದು wasteage ನಲ್ಲಿ ಬಂದು ಬಿಡುತ್ತದೆ. Research ಅನ್ನು ನಡೆಸುತ್ತದೆ. ಆಗಲೇ ಅವರು ಸಾಬೀತು ಮಾಡಿದರು. ಇದು ಉತ್ತಮ material ಆಗಿದೆ ಎಂದು ಮತ್ತು Research ಇನ್ನೂ ಮುಗಿದಿಲ್ಲ. ಮುಂದೆಯೂ ಯಾವುದಾದರೂ ಉತ್ತಮ ಗೊಳಿಸಿದರೆ ನಿಮಗೆ ತಿಳಿಸಲಾಗುವುದು. ಆದರೆ ನನ್ನ ಭಾವನೆಯಾಗಿದೆ. ನಿಮ್ಮ ಜೀವನದಲ್ಲಿ ತೋರಿಸುವುದಿಲ್ಲ.

ಈ ಪ್ರಶ್ನೆಗೆ, ನಿಮ್ಮ ಬಳಿ silicon casist ಬಗ್ಗೆ experience ಗಳಿವೆ. ಝುಹೀರ್ ಸಾಹಿಬ್ ಹೇಳಿದರು. ಇನ್ನು ಅದರ protection ಪ್ರಾರಂಭವಾಗಿಲ್ಲ. ಇನ್ನು ಕೇವಲ model sample ತಯಾರಾಗಿದೆ.

ಆಗ ಹುಝೂರ್ ಹೇಳಿದರು. ನೀವು Model sample ಗಳನ್ನು ಎಷ್ಟು ಸಮಯದವರೆಗೆ ಇಟ್ಟು ನೋಡಿದ್ದೀರಿ. ಇಂತಹದೊಂದು measurement ಇದೆಯೇ ಅದು ಮೊದಲಿನ material ನಲ್ಲಿದ್ದ Reactivity ಗಿಂತ ಹೆಚ್ಚಾಗಿತ್ತು. ಈಗ ಕಡಿಮೆಯಾಗಿದೆ ಎನ್ನುವಂತಹದ್ದು?

ಆಗ ಝುಹಿರ್ ಸಾಹಿಬ್ ಹೇಳಿದರು. Physically ಅದರಲ್ಲಿಟ್ಟು ಚೆಕ್ ಮಾಡಲು ಸಾಧ್ಯವಿಲ್ಲ.

ಕೊನೆಯಲ್ಲಿ ಹುಝೂರ್ ಹೇಳಿದರು. ಸಾರಾಂಶವೇನೆಂದರೆ ಇನ್ನು

ಸಂಶೋಧನೆ ನಡೆಯುತ್ತ ಇದೆ, ಪರಿಣಾಮ ಬಂದ ಮೇಲೆ ನಿಮಗೆ ತಿಳಿಸಲಾಗುವುದು.

ಇನ್ನೊಬ್ಬ ವಿದ್ಯಾರ್ಥಿ ಹೇಳಿದನು ನಾನು computimation science program ಅಧ್ಯಯನ ಮಾಡುತ್ತಿದ್ದೆನೆ. ಇದು Association ಮಾಡುತ್ತಿದೆ. ಆದರೆ ಅವರಿಗೆ Law (ಕಾನೂನು) ಅರಿವು ಇರುತ್ತದೆ. ಅವರು Result ನೋಡಲು ಪ್ರಯತ್ನ ಮಾಡುತ್ತಾರೆ. Result ಏನಾಗಬಹುದೆಂದು, Result ಅನ್ನು ವಾಸ್ತವದಿಂದ compare ಮಾಡಿ ನೋಡಲಾಗುತ್ತಿದೆ. ನಾನು ಹಿಂದಿನ ಭೇಟಿಗಳಲ್ಲಿ ನಿಮ್ಮ ಸಲಹೆಯಂತೆ Neuro science ನಲ್ಲಿ specialization ಮಾಡಿದ್ದೆನು. ನಾವು ಒಮ್ಮೆ ನ್ಯೂರೋ science Track ಮೇಲೆ ಹೋದರೆ ಅಧಿಕವಾಗಿ Machine learning ಮತ್ತು Artificial Entigence ನಲ್ಲಿ ಬೀಳುತ್ತೇವೆ. ಒಮ್ಮೆ ಒಂದು ಮಾತಿತ್ತು. ಅದೇನೆಂದರೆ Artificial inteligence Develop ಆಗುತ್ತಿದೆ. ಆಗ ಸ್ವಲ್ಪ ಸಂಶಯವಿತ್ತು. ತಾವು ಕೇಳಿದಾಗ ಉತ್ತರ ನೀಡಲು ಸಾಧ್ಯವಾಗಿರಲಿಲ್ಲ. ಅಂದರೆ ಅದು ಪೂರ್ವ ಸಿದ್ಧತೆಯಿರುವ ಕಾರ್ಯ ಯೋಜನೆಯ ಮೇಲೆಯೇ ಕಾರ್ಯ ಮಾಡಬಹುದು" ಎಂಬುದಾಗಿತ್ತು. ಆ ಮಾತು ಆ ದಿಶೆಯಲ್ಲಿ ನಾನು ಒಂದು ಕೋರ್ಸ್ Attend ಮಾಡಿದ್ದೆ. ಅದರಲ್ಲಿ ನಮ್ಮ ಪ್ರೋಫೆಸರ್ ತಿಳಿಸಿದ್ದರು. Artificial inteligence ನಲ್ಲಿ ಎಷ್ಟೆಲ್ಲ Technics ಗಳಿವೆ. ಅದು Machine learning ಆಗಲೀ ಅಥವ Standard statistics ಆಗಲಿ, Brain (ಮಿದುಳಿನಲ್ಲಿ) ಏನು Learning ಇರುತ್ತದೆ ಅದು ತುಂಬ similar ಆಗಿರುತ್ತದೆ.

ಹುಝೂರ್ ಹೇಳಿದರು. ಬಹುಶಃ ಅದೇ ನಾನು ಹೇಳಿದ್ದೆ. ನೀವು ಏನು ಫೀಡ್ ಮಾಡಿರುತ್ತೀರಿ. ಅದು ಅದೇ ಉತ್ತರವಾಗಿ ನೀಡುವುದು. ಮತ್ತು ಯಾವುದು ಫೀಡ್ ಮಾಡಲಿಲ್ಲ. ಅದರ ಉತ್ತರ ದೊರೆಯುವುದಿಲ್ಲ.

ವಿದ್ಯಾರ್ಥಿಯು ಹೇಳಿದನು. ಹೌದು ನೀವು ಆ ಕಡೆಯೇ ಸಂಕೇತ ನೀಡಿದ್ದಿರಿ. ಈ ನೆಲೆಯಲ್ಲಿ ನೋಡುವುದಾದರೆ ನಾವು ನಮಗೆ ಉತ್ತರ ಗೊತ್ತಿಲ್ಲದಂತಹ system ಸಜ್ಜುಗೊಳಿಸಬೇಕು.

ಹುಝೂರ್ ಹೇಳಿದರು ಉತ್ತರ ಬರುವುದು ಅನಿವಾರ್ಯವಲ್ಲ, ಆದರೆ ಹಾಗೆಯೇ ಯಾವುದೋ ಒಂದು ವಿಷಯ ಹಾಕುತ್ತೀರಿ. ಯಾವುದೋ ಒಂದು ಉತ್ತರ ಬಂದಿರುತ್ತದೆ. ಆಗ ಅದನ್ನು Prove ಮಾಡಲು ನೀವು ನಿಮ್ಮ ಯೋಚನೆಯಿಂದ calculate ಮಾಡಬೇಕು. ಆದುದರಿಂದ ಕೆಲವು ಹುಡುಗರು ಕಂಪ್ಯೂಟರಿನಲ್ಲಿ ಅತ್ಯಧಿಕ Hack ಮಾಡುತ್ತಾರೆ. ಅದು ಎಲ್ಲೆಲ್ಲೂ Hack ಮಾಡಿಕೊಂಡು ಹೋಗುತ್ತಾರೆ. ದೊಡ್ಡ ದೊಡ್ಡ ಕಂಪಿನಗಳಿಗೆ ನಷ್ಟವನ್ನುಂಟು ಮಾಡುತ್ತಾರೆ. ಅದನ್ನು Prove ಮಾಡುವ ಆ ಹುಡುಗರ ಉದ್ದೇಶವಾಗಿರುವುದಿಲ್ಲ. ಇದು ಸರಿಯೇ ಅಥವಾ ತಪ್ಪು. ಅವರು ಒಂದು ಕಲೆ (Art) ಎಂದು ಭಾವಿಸುತ್ತಾರೆ. ನೋಡು ನೋಡುತ್ತ ಎಲ್ಲಿಂದ ಎಲ್ಲೋ ಹೋಗಿ ಬಿಡುತ್ತಾರೆ. ನೀವು ಎಂದು ಕಂಪ್ಯೂಟರ್ ಉಪಯೋಗಿಸುವವರಾದರೆ ಯಾವುದೇ Formula ಹಾಕುವುದಾದರೆ, ಯಾವುದೇ Methodology ಹಾಕಿದರೆ, ಅದರ ಮೇಲೆ ಸಂಶೋಧನೆ ನಡೆಸಲು ಪ್ರಾರಂಭಿಸಿದರೆ, ಅದರ Result ಬಂದ ಮೇಲೆ ನಿಜವಾಗಿಯೂ ಅದು ಸರಿಯಾಗಿದೆ ಅಥವಾ ತಪ್ಪಾಗಿದೆ ಎಂದು ತಿಳಿಯಲು, ಅದನ್ನು Prove ಮಾಡಬೇಕಾಗುವುದು. ಮತ್ತೆ ನೀವು ಅದೇ steps ಗಳ ಕಡೆ ಮರಳಿ ಹೋಗಬೇಕು, ನೋಡಬೇಕು Result ಅದಕ್ಕೆ ಹೋಲುತ್ತದೆಯೇ ಇಲ್ಲವೋ, 12 ಅನ್ನು 12 ರಿಂದ ಗುಣಿಸಿದರೆ ಅದರ Result 144 ಆಗುತ್ತದೆ ಎಂಬುದು ನಮಗೆ ತಿಳಿದಿರುತ್ತದೆ. ಈಗ ಕಂಪ್ಯೂಟರ್‌ನಲ್ಲಿ 144 ತೋರಿಸುತ್ತದೆ ಅಂದರೆ ಅದಕ್ಕೆ ಕಾರಣ ನೀವು ಅದರಲ್ಲಿ ಫೀಡ್ ಮಾಡಿರುತ್ತೀರಿ. ಅದು ತೋರಿಸಲಿಲ್ಲವಾದರೆ ನೀವು ಆ ಕಂಪ್ಯೂಟರ್ ಸರಿ ಇದೆ, ಇಲ್ಲ ಎಂಬುದು ನೋಡುತ್ತೀರಿ. ಆಗ ಪ್ರೋಫೆಸರ್ ಏನು ಹೇಳುವುದು.

ವಿದ್ಯಾರ್ಥಿ ಹೇಳಿದನು. ನಿಜವಾಗಿಯೂ computer pure Mandemmess ಪ್ರಕಟಗೊಳಿಸುವುದಿಲ್ಲ. ಆದರೆ ಅದರ application ನೋಡಿದರೆ ಅದರ ರಚನೆ ಒಂದು Robot ತರಹವಿರುತ್ತದೆ. ಸ್ವಯಂ ನಿಮಗೆ ನಿಯಂತ್ರಿಸಬೇಕಾಗುತ್ತದೆ. ಕೆಲವೊಮ್ಮೆ ಹಾಗೆ ಸಾಧ್ಯವಾಗುವುದಿಲ್ಲ. ಉದಾಹರಣೆಗೆ space (ಅಂತರಿಕ್ಷ) ದಲ್ಲಿ

ಹುಝೂರ್ ಹೇಳಿದರು. ನಮ್ಮ ಶಾಲೆಯಲ್ಲಿ ಶಿಕ್ಷಕರೊಬ್ಬರಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ (ದ್ವಿತೀಯ) ಅವರಿಗೆ ಅತಾಲೀಖ್ ಎಂಬ ಬಿರುದು ನೀಡಿದರು. ಅವರ ಮಕ್ಕಳಿಗೂ ಬೋಧನೆ ಮಾಡುತ್ತಿದ್ದರು. ಅವರ mathematcis (ಗಣಿತ) ಎಷ್ಟು ಉತ್ತಮವಾಗಿತ್ತೆಂದರೆ ಲಕ್ಷಗಟ್ಟಲೆ ಗುಣಕಾರ ಕೇಳಿದರೆ ಸೆಕೆಂಡುಗಳಲ್ಲಿ ಅದರ ಉತ್ತರ ನೀಡುತ್ತಿದ್ದರು. calculation ನಲ್ಲಿ ಅಷ್ಟೊಂದು ಅವರ ಮಿದುಳು ಕೆಲಸ ಮಾಡುತ್ತಿತ್ತು. ಹಾಗೆಯೇ ಈ ಕಂಪ್ಯೂಟರ್ ಮಾಡಿದವನು ಅದೇ ತಾನೇ ಹೇಳುವುದು ಇದು ಕಂಪ್ಯೂಟರಿಗೆ (ಮಿದುಳಿಗೆ) ಎದುರಿಸಲು ಸಾಧ್ಯವಿಲ್ಲ. ಆದರೆ ಅದರಿಂದ ಒಂದು ಸವಲತ್ತು ನಮಗೆ ಒದಗಿ ಬಂದಿದೆ. ಅದರ ಬಾಧಕವೇನೆಂದರೆ ಕೆಲವು ಸಂದರ್ಭ ತನ್ನ ಮಾಲ್ ವಿಭಾಗದಲ್ಲಿ, ಇದರ ಗುಣಾಕಾರ ಎಷ್ಟು ಆಗುತ್ತದೆ ಎಂದು ಕೇಳಿದರೆ ತಕ್ಷಣ ಅವರು calculator ತೆರೆಯುತ್ತಾರೆ. ಅದಾಗ್ಯೂ ಅದು ಮೌಖಿಕವಾಗಿ ಹೇಳಬಹುದು. ಅಂತೂ ನಿಮಗೆ ಇದರಿಂದ ಏನಾದರೂ ತಿಳಿಯುವುದು ಸಂಭವವಾಗಿರಬಹುದು.

ಇನ್ನೊಬ್ಬ ವಿದ್ಯಾರ್ಥಿ ಹೇಳಿದನು. ನಾನು construction engineering ಮಾಡುತ್ತಿದ್ದೇನೆ. ನಿಮ್ಮಿಂದ ನನ್ನ ಒಂದು ಬೇಡಿಕೆ ಇತ್ತು. ಜೇನು ತೆಗೆದುಕೊಂಡು ಬಂದಿದ್ದೆ?

ಹುಝುರ್ ಹೇಳಿದರು. Private secretry ಯ ಕಚೇರಿಯಲ್ಲಿ ಕೊಟ್ಟುಬಿಡಿ ಮತ್ತು ಸಂಜೆ ಆಗಲಿ ಅಥವಾ ಮುಂಜಾನೆ ತೆಗೆದುಕೊಳ್ಳಿ. ಮತ್ತೆ ಹುಝೂರ್ ಹೇಳಿದರು. ಎಲ್ಲಿರುತ್ತೀರಿ? ಆಗ ನಾನು ಹೇಳಿದೆ. ಹುಝೂರ್ Dusseldonf ನಲ್ಲಿರುತ್ತೇನೆ. ಮತ್ತು ನಾನು ಈಗಲೇ ಹೋಗಬೇಕಾಗಿದೆ. ಆಗ ಹುಝೂರ್ ಪ್ರೀತಿಪೂರ್ವಕವಾಗಿ ಹೇಳಿದರು. Private Secretary ಗೆ ನೀಡಿ ಸಾಯಂಕಾಲ ತೆಗೆದುಕೊಳ್ಳಿ.

ಇನ್ನೊಬ್ಬ ಅಹ್ಮದಿ ವಿದ್ಯಾರ್ಥಿ ಪ್ರಶ್ನೆ ಕೇಳಿದನು. ಹುಝೂರ್ ನೀವು ಓದುವ ಕಾಲಕ್ಕೆ ಮತ್ತು ಪರೀಕ್ಷೆ ಕೊಡುವ ಸಮಯ ಯಾವ ದುಆ ಕಡೆ ಗಮನವಿರುತ್ತಿತ್ತು?

ಹುಝೂರ್ ಹೇಳಿದರು. ನಾನು ಓದುವಿಕೆಯಲ್ಲಿ ತುಂಬ ಹಿಂದೆ ಇದ್ದೆ. ದುಆ ಮಾಡುತ್ತಿದ್ದೆ. ದುಆ ಪರಿಣಾಮದಿಂದಲೇ ಪಾಸಾಗಿದ್ದೇನೆ.

**(ಮುಂದುವರಿಯುವುದು)**

## ತಿದ್ದುಪಡಿ ಪ್ರಕಟಣೆ

01 ಅಕ್ಟೋಬರ್ 2020 ರ ಬದರ್ ಪತ್ರಿಕೆಯ ಪುಟ ಸಂಖ್ಯೆ ಒಂದರಲ್ಲಿ ಈ ಹದೀಸ್ ಮುದ್ರಣಗೊಂಡಿತ್ತು.

"ಅಬೂಖತಾದ(ರ) ವರದಿ ಮಾಡುತ್ತಾರೆ. ನಬಿ ಕರೀಂ(ಸ) ಝುಹರ್ ಮತ್ತು ಅಸರಿನ ಎರಡು ರಕತುಗಳಲ್ಲಿ ಸೂರಃ ಫಾತಿಹ ಮತ್ತು ಯಾವುದಾದರೂ ಸೂರಃ ಪಠಿಸುತ್ತಿದ್ದರು ಮತ್ತು ಒಮ್ಮೊಮ್ಮೆ ನಮಗೂ ಯಾವುದಾದರೂ ವಚನ ಆಲಿಸುವಂತೆ ಮಾಡುತ್ತಿದ್ದರು.

ಈ ಕುರಿತು ಹಝ್ರತ್ ಖಲೀಫತುಲ್ ಮಸೀಹ್(ಅಬಿಅ) ರವರ ಆಪ್ತ ಕಾರ್ಯದರ್ಶಿಯವರಿಂದ ಒಂದು ಕಾಗದ ದೊರೆತಿದೆ.

ಅದರಲ್ಲಿ ಈ ಕುರಿತು ಸಂಶೋಧಿಸಲು ಹೇಳಿದ ಪ್ರಯುಕ್ತ ಈ ಮಾತು ಸ್ಪಷ್ಟವಾಯಿತು. ಹದೀಸಿನಲ್ಲಿ ಲಿಖಿತ ಪದಗಳಾದ "ವ ಯುಸ್ಮಿಯುಲ್ ಆಯಾತ ಅಹ್‌ಯಾನನ್" ಅಂದರೆ ಕೆಲವೊಮ್ಮೆ ಹುಝೂರ್(ಸ) ನಮಗೆ ಯಾವುದಾದರೂ ವಚನ ಒಂದು ಓದಿಸಿಯೂ ಕೊಡುತ್ತಿದ್ದರು. ಅದರರ್ಥ ಉಚ್ಛ ಸ್ವರದಲ್ಲಿ ಖಿರ್‌ಅತ್ ಮಾಡುವುದೆಂದಲ್ಲ. ಬದಲು ಅದರರ್ಥವೇನೆಂದರೆ ಹಝ್ರತ್ ರಸೂಲುಲ್ಲಾಹ್(ಸ) ಸಹಾಬರಿಗೆ ಧರ್ಮಬೋಧನೆ ಮಾಡುವ ಸಲುವಾಗಿ ಒಂದೊಮ್ಮೆ ವಚನದ ಕೆಲ ಪದಗಳನ್ನು ಧ್ವನಿಸಹಿತ ಹೇಳುತ್ತಿದ್ದರು ಅಥವಾ ಆಗ ಪಠಿಸುವಾಗ ಮೆಲೂಧ್ವನಿಯಲ್ಲಿಯೂ ಪಠಿಸುತ್ತಿದ್ದರು. ಅದರಿಂದ ಕೇಳುವವರಿಗೆ ಯಾವ ವಚನಗಳನ್ನು ಪಠಿಸುತ್ತಿದ್ದಾರೆ ಎಂಬುದು ತಿಳಿದು ಬರುತ್ತಿತ್ತು."

ಹುಝೂರ್ ಅನ್ವರ್ ಅರುಹಿದರು. "ಈ ಹದೀಸ್ ಉಲ್ಲೇಖನೀಯವಾಗಿದೆ. ಅದರಂತೆ ಸರಿಪಡಿಸಬೇಕಾಗಿದೆ ಮತ್ತು ಮುಂದೆ ವಿಷಯುವನ್ನು ಗಂಭೀರವಾಗಿ ಯೋಚಿಸಿ ಪಠಿಸಬೇಕು ಅನಂತರ ಮುದ್ರಿಸಬೇಕು."

ಸಂಸ್ಥೆಯು ತಮ್ಮ ಈ ತಪ್ಪನ್ನು ಮನ್ನಿಸಿ ಕ್ಷಮೆ ಕೋರುತ್ತದೆ. ಅಲ್ಲಾಹನು ನಮಗೆ ಹುಝೂರ್(ಅಬಿಅ) ಇಂಗಿತದಂತೆ ಉತ್ತಮ ರೀತಿಯಲ್ಲಿ ಸ್ವೀಕಾರಾರ್ಹ ಸೇವೆಗಳನ್ನು ಮಾಡುವ ಭಾಗ್ಯ ದಯಪಾಲಿಸಲಿ. **ಆಮೀನ್**

**(ಪತ್ರಿಕಾಂಗ)**

## ಜಲ್ಸ ಸಾಲಾನ ಖಾದಿಯಾನ್ 2020 ರದ್ದುಗೊಳಿಸಲಾಗಿದೆ

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಎಲ್ಲಾ ಸದಸ್ಯರು ಹಾಗೂ ಹುದ್ದೆದಾರರಿಗೆ ತಿಳಿಸುವುದೇನೆಂದರೆ ಈ ವರ್ಷ ಡಿಸೆಂಬರ್ 25 ರಿಂದ 27ರವರೆಗೆ ನಡೆಯ ಬೇಕಾದ ಜಲ್ಸ ಸಾಲಾನ (ವಾರ್ಷಿಕ ಸಮ್ಮೇಳನ) ಖಾದಿಯಾನ್ ದೇಶದಾದ್ಯಂತ ಹರಡಿರುವ ಸಾಂಕ್ರಾಮಿಕ ರೋಗ ಕೊರೋನದಿಂದ ಹಾಗೂ ಪ್ರವಾಸಿಗಳಿಗೆ ಆಗುವ ಅಸೌಕರ್ಯದ ಕಾರಣದಿಂದ ಹುಝೂರ್(ಅಬಿಅ)ರವರ ನಿರ್ದೇಶನದ ಪ್ರಕಾರ ರದ್ದುಗೊಳಿಸಲಾಗಿದೆ.

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಮರ್‌ಕಝಿಯಾ, ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.1, Thursday, 03 December 2020, Issue No. 47

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 46ರ ವರದಿಯ ಉಳಿದ ಭಾಗ)**

ಒಬ್ಬ ವಿದ್ಯಾರ್ಥಿ ಪ್ರಶ್ನೆ ಮಾಡಿದನು. ನೀವು ಮಾಡುತ್ತಿರುವ ಹೊಸ carinsters ಅದು ಹೊಸ wastes ಗಳಿಗಾಗಿ ಮಾಡುತ್ತಿದ್ದೀರಿ. ಮೊದಲು ದಫನ್ ಮಾಡಲಾಗಿದ್ದು, ಅದರದ್ದು ಏನಾಗುವುದು?

ಆಗ ಹುಝೂರ್ ಹೇಳಿದರು. ನಿಮ್ಮ ಹತ್ತನೆಯ ಹನ್ನೊರಡನೆಯ ಪೀಳಿಗೆಯು ಅದರ ಶಿಕ್ಷೆ ಅನುಭವಿಸುವುದು.

ಝುಹೀರ್ ಸಾಹಿಬ್ ಹೇಳಿದರು. ಹೌದು1 ಈಗ wstes ಆಗಿದ್ದು ಅದನ್ನು ಮರಳಿ ಉಪಯೋಗಿಸಲಾಗುವುದು, ಆದರೆ ನಂತರ ಅದು ಕೂಡ

ಈ ಹೊಸ canisters ಗಳಲ್ಲಿ ಶಿಫ್ಟ್ ಮಾಡಲಾಗುವುದು.

ಹುಝೂರ್ ಹೇಳಿದರು. ಅದನ್ನು 500 ಮೀಟರ್ ಕೆಳಗೆ ದಫನ್ ಮಾಡಲಾಗುತ್ತದೆ. ಅದರ Radiation ಬರಲಾರಂಭಿಸಿದರೆ ಎಷ್ಟು ಅವಧಿಯಲ್ಲಿ ಈ ಭೂಮಿ ಬೆಳೆಗಳ ಮೇಲೆ ಅಥವಾ ಫಲಗಳಿಂದ ತುಂಬಿದ ವೃಕ್ಷಗಳ ಮೇಲೆ,

ಆಗ ಅವರು ಹೇಳಿದರು. ಮರಗಳ ಮೇಲೆ ಸೇರಿದರೆ ಅದನ್ನು ಉಪಯೋಗಿಸಿದರೆ ಮಾನವ ಶರೀರದಲ್ಲಿ ಸೇರುವುದು ಅಥವಾ ನೀರಿನಲ್ಲಿ ಸೇರಿದರೆ ಆ ನೀರು ಮನುಷ್ಯನು ಕುಡಿದರೆ ಅದರ ಪ್ರಭಾವ ಬೀರುವುದು.

ಹುಝೂರ್ ಹೇಳಿದರು. ಭೂಮಿಯಿಂದ ನೀರು ತೆಗೆಯುವಾಗ ಇದರ ಪ್ರಭಾವ ಬೀರಬಹುದು. ಒಂದಿಷ್ಟು ಮಟ್ಟಿಗೆ ಮೇಲೆ ಬಂದರೆ, ಆದರೆ ನದಿಗಳು ಮತ್ತು ಕಾಲುವೆಗಳು ಇದ್ದರೆ, ಅದನ್ನು ನೀವು ಬಂದ್ ಮಾಡುತ್ತಿದ್ದೀರಿ, ಎಲ್ಲ ವ್ಯವಸ್ಥೆ ಮನುಷ್ಯನು ಸ್ವಯಂ ನಾಶ ಮಾಡುತ್ತಿದ್ದಾನೆ. ನದಿಗಳದ್ದು ಅಥವ ಮಳೆ ಕಡಿಮೆಯಾದಾಗ ಅಥವ ಹೆಚ್ಚಾದಾಗ, ಈಗ ಹೇಳುತ್ತಿದ್ದಾರೆ. ಕೆಲವು ಕ್ಷೇತ್ರಗಳಲ್ಲಿ ಮಳೆ ಕಡಿಮೆಯಾಗತೊಡಗಿದೆ ಎಂದು, ಮತ್ತು ಭೂಮಿಯಲ್ಲಿ ನೀರು ಸಹ ತುಂಬ ಕೆಳಗೆ ಹೋಗಿದೆ. ಆಗ ಕೆಳಗಿನಿಂದ ತೆಗೆಯುವಿರಿ, ಇದರಿಂದಲೂ ಒಂದು ಸಮಯ ನಷ್ಟ ಅನುಭವಿಸುವರು, ಮತ್ತು ನೀವೇನು ಅದನ್ನು ದಫನ್ ವಾಡುತ್ತಿದ್ದೀರಿ, ಅದು ಇತರ ದೇಶದವರಿಗೆ ಸೀಮಿತವಾಗಿರುವುದು ಅಥವಾ ಪಕ್ಕದ ದೇಶಗಳಿಗೆ ಇದರ ಪ್ರಭಾವ ಬೀರುವುದು.

ಆಗ ಅವರು ಹೇಳಿದರು. ಇಂತಹ ಸ್ಥಳಗಳಲ್ಲಿ Tunnels ನಿರ್ಮಾಣ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಗುಡ್ಡ ಪ್ರದೇಶವಿದೆ ಅಲ್ಲಿ.

ಹುಝೂರ್ ಹೇಳಿದರು. ಸದ್ಯ ಎಲ್ಲಿ ಜನಸಂಖ್ಯೆಯಿಲ್ಲ, ಅದನ್ನು ಹೊಸ consisters ಗಳಲ್ಲಿ ಹಾಕುವಿರಿ ಅಥವಾ ಅದರ ಮೇಲೆ ಹೊಸ consisters ಗಳನ್ನು ಏರಿಸುವಿರಿ ಎಂದಾದರೂ ಇದರ ಮೇಲೆ Research ಮಾಡಿದಿರಿ. ನೀವು ಎಷ್ಟು ಪ್ರಯೋಜನ ಲಾಭಕ್ಕಾಗಿ ಇದನ್ನು ಮಾಡುತ್ತಿದ್ದೀರಿ, ಮುಂದಿನ ನೂರು ವರ್ಷಗಳ ಮೇಲೆ ಅಥವಾ ಎರಡು ನೂರು ವರ್ಷಗಳ ಮಾಡುತ್ತಿದ್ದೀರಿ, ಮುಂದಿನ ನೂರು ವರ್ಷ ಅಥವಾ ಎರಡು ನೂರು ವರ್ಷಗಳ ಮೇಲೆ, ಮುಂದಿನ ಜನಾಂಗಗಳಿಗೆ ಎಷ್ಟು ನಷ್ಟ ಉಂಟು ಮಾಡವುದು?

ಆಗ ಹೇಳಿದರು. ಕೆಲವು ದೇಶಗಳಿವೆ. ಅವರಿಗೆ ಈ ಕಲ್ಪನೆ ಮೂಡತೊಡಗಿದೆ.

ಹುಝೂರ್ ಹೇಳಿದರು. ಮನುಷ್ಯನಿಗೆ ಕೇವಲ ತನ್ನ ಹೊಟ್ಟೆ ತುಂಬಿಸಿಕೊಳ್ಳುವ ಕಡೆ ಚಿಂತೆಯಿದೆ. ತನ್ನ ಸುಖದ ಕಡೆ ಚಿಂತೆಯಿದೆ. ಇದೀಗ ಜಪಾನ್‌ಲ್ಲಿ ಏನು ಸುನಾಮಿ ಬಂದಿತ್ತು. ಅಲ್ಲಿ ಅವರು ಜೋಡಿಸಿಟ್ಟಿದ್ದ ರಿಯಾಕ್ಟರ್‌ಗಳಿದ್ದವು. ವಿದ್ಯುತ್ ಉತ್ಪಾದನೆ ಮಾಡುತ್ತಿದ್ದವು. ಈಗ ಅವರ ನೀರು ಬಿಡಿಸಿದೆ, ಅದೇ ಎಷ್ಟೊಂದು Radioactivity ಉತ್ಪಾದಿಸಿದೆ ಎಂದರೆ ಅದನ್ನು ನಿಯಂತ್ರಿಸಲು ಆಗುತ್ತಿಲ್ಲ. ಅದನ್ನು ರಕ್ಷಿಸಿಕೊಳ್ಳಬಹುದು. ಆದರೆ ಯಾವುದೇ ಸುರಕ್ಷಿತ ಕ್ರಮ ಏಕೆ ಕಂಡು ಹಿಡಿಯುವುದಿಲ್ಲ?

ಆಗ ಸಂಶೋಧನೆ ನಡೆಸುವ ವಿದ್ಯಾರ್ಥಿ ಹೇಳಿದ. ಕನಿಷ್ಠ ಮಟ್ಟ 5 ನೂರು ವರ್ಷಗಳವರೆಗೆ ಸುರಕ್ಷಿತ ಕ್ರಮ ಕೈಗೊಳ್ಳುವ ಪ್ರಯತ್ನದಲ್ಲಿದ್ದಾರೆ, ಏಕೆಂದರೆ 500 ವರ್ಷಗಳ ನಂತರ ಅದರ Radioactivity ಕಡಿಮೆಯಾಗಿ ಬಿಡುತ್ತದೆ, ಅಷ್ಟೊಂದು ಹೆಚ್ಚಿರುವುದಿಲ್ಲ, ಅದಾದ ನಂತರ ಅದು ಹೊರಗೆ ಬಂದರೂ ಅಷ್ಟೊಂದು ಹಾನಿ ಉಂಟಾಗುವುದಿಲ್ಲ, ಆದರೆ ಹಾನಿಯಂತೂ ಆಗುವುದು ನಿಶ್ಚಿತ.

ಹುಝೂರ್ ಹೇಳಿದರು. ಆರು, ಏಳು ನೂರು ವರ್ಷಗಳ ನಂತರ ಹೊಸ ಆದಮ್ ಬರುವುದು, ಸ್ವಯಂ ಅನುಭವಿಸಬಹುದು.

ಆತಿಫ್ ಚೌಹಾನ್ ಎಂಬ ಒಬ್ಬ ವಿದ್ಯಾರ್ಥಿ ಹೇಳಿದನು. ನಾನು ವಾರ್ತಾ ಪತ್ರಿಕೆಯಲ್ಲಿ ಒಂದು ಲೇಖನ (Article) ಓದಿದ್ದೆ, ವಿಜ್ಞಾನಿಗಳು waste ಒಂದನ್ನು ಒಂದು ರಾಕೆಟ್‌ಗೆ ಕಟ್ಟಿ ಒಂದು unlimited time ವರೆಗೆ universes ನಲ್ಲಿ ಬಿಡುವಂತೆ ಯೋಚಿಸುತ್ತಿದ್ದಾರೆ?

ಆಗ ಹುಝೂರ್ ಹೇಳಿದರು. ಮೇಲೆ ಹೋಗಲಿಕ್ಕೆ ಯಾರ ಬಳಿ ರಾಕೇಟ್‌ವಿದೆ.

ಅಮೇರಿಕಾ ತಲುಪಿಸುವುದೆ, ಕೆನಡಾ ತಲುಪಿಸುವುದು, ಬಹುಶಹ ಜರ್ಮನಿ ಕೊಂಡು ಹೋಗಬಹುದು, ಆದರೂ ಬಾಕಿ ಸ್ಥಳಗಳಲ್ಲಿ ಆಗುತ್ತಿರುವುದು, ಅಲ್ಲಿಯ ತನಕ ಗಾಳಿಯಲ್ಲಿ ತಲುಪಿಸುವುದು ಅದಕ್ಕಿಂತ ಮುಂಚೆ ಮನುಷ್ಯನು ಗಾಳಿಯಲ್ಲಿ ತಲುಪಿ ಬಿಡುತ್ತಾನೆ, ಜನರಿಗೆ ಭರವಸೆ ನೀಡಲು ಈ ಮಾತುಗಳನ್ನು ಆಡುತ್ತಿರುತ್ತಾರೆ. ಇದನ್ನು ಮಾಡುತ್ತಿದ್ದಾರೆಂದರೆ ವಾಸ್ತವದಲ್ಲಿ ಎಲ್ಲ ವ್ಯವಸ್ಥೆಯನ್ನೆ ಹಾಳು ಮಾಡುತ್ತಿದ್ದಾರೆ. ಈ Green House Affect ಆಗುತ್ತಿರುವುದಕ್ಕೆ ಅದೇ ಕಾರಣದಿಂದ, ಸಮತೋಲನ ಹದಗೆಟ್ಟಿದೆ. ಗಿಡಗಳನ್ನು ನೆಡಿ, ಒಂದಂತೂ ಇದು ನಾಶದ ಕೆಲಸ ಆಗುತ್ತಿದೆ. ಸ್ವಹಿತಕ್ಕಾಗಿ ಆಗುತ್ತಿದೆ, ಎಲ್ಲಿ ಹಿತಕ್ಕಾಗಿ ಕೆಲಸ ಆಗುತ್ತಿದೆ. ಮಾನವನ ಆರೋಗ್ಯಕ್ಕಾಗಿ, ಜೀವನಕ್ಕಾಗಿ ಅಲ್ಲಿ ಸ್ವಲ್ಪ ಮಟ್ಟಿನ Material ಗಳಿಂದ Radioactive plant ಗಳಿವೆ. ಅದರಿಂದ ಹೆಚ್ಚು ಉಪಯೋಗ ಪಡೆಯಬಹುದು. ಹೆಚ್ಚಿನ waste ಎಲ್ಲಿಂದ ಬರುತ್ತಿದೆ. ಆ ಕಾರ್ಖಾನೆಗಳಿಂದ ಅಲ್ಲವೇ?

ಹುಝೂರ್ ಹೇಳಿದರು. Emergy ಗೋಸ್ಕರ ಬರುತ್ತಿದ್ದರೆ ಅಲ್ಲಿ Solar emergency ಯೂ ದೊರೆಬಹುದು. ಅಲ್ಲಿಂದಲೂ ಪಡೆಯಬಹುದಾಗಿದೆ. ಜಪಾನಿನಲ್ಲಿ ಸುನಾಮಿ ಬಂದಾಗ ಹಲವು ದೇಶಗಳು ತನ್ನ ಪ್ಲಾಂಟುಗಳನ್ನು ಬಂದ್ ಮಾಡಿದ್ದಾರೆ. ಜರ್ಮನಿಯಿಂದಲೂ ಸುದ್ದಿ ಬಂದಿತ್ತು. ತನ್ನ ಪ್ಲಾಂಟುಗಳನ್ನು ಬಂದ್ ಮಾಡಿದೆ ಎಂದು. ಹಾಗಾದರೆ ಏನು ಪ್ರಯೋಜನವಾಯಿತು. ಪ್ಲಾಂಟ್ ಬಂದ್ ಮಾಡಿದ್ದೀರಿ. ಆದರೆ Radioactive maerial ಅಲ್ಲೇ ಉಳಿದುಕೊಂಡಿವೆ. ಅದನ್ನು ಹಾನಿ ತಟ್ಟಿದರೆ ಎಷ್ಟರಮಟ್ಟಿಗೆ ಅದು ಸುರಕ್ಷಿತವಾಗಿದೆ, ಕಾಂಕ್ರಿಟ್ ಗೋಡೆಯು ಅದನ್ನು ರಕ್ಷಿಸಲು ಸಾಧ್ಯವಿಲ್ಲ. ಯಾವಾಗಲಾದರೂ ಹಾನಿ ತಲುಪಿಸಬಹುದು. ಅದೇ ರೀತಿ ಯು.ಕೆ ಇದರ ಸ್ಥಳಗಳಲ್ಲಿಯೂ ಇದೆ. ಇದೀಗ ಪ್ಲಾಂಟುಗಳು ಏನು ಬಂದ್ ಆಗಿದೆ. ಆ ಕುರಿತು ಸರಕಾರ ಏನಾದರೂ ಅದನ್ನು ಭೂಮಿಯಲ್ಲಿ ದಫನ್ ಮಾಡಲು ಯೋಜನೆ ಹಾಕಿದೆಯೇ?

ಆಗ ಅವರು ಹೇಳಿದರು. ಸದ್ಯ ಇನ್ನು ಅದನ್ನು Activate ಮಾಡದಿರಲು ಪ್ರಯತ್ನದಲ್ಲಿದ್ದಾರೆ. ಅಲ್ಲಿ ಏನೆಲ್ಲ material ಉಪಯೋಗವಾಗುತ್ತಿತ್ತು. ಅದನ್ನು consisters ನಲ್ಲಿ ಹಾಕಿ ಸುರಕ್ಷಿತಗೊಳಿಸಿದ್ದಾರೆ. ಈಗ ಮತ್ತೆ ಅದನ್ನು ಉಪಯೋಗಿಸುವುದಿಲ್ಲ. ಇನ್ನು ಇದ್ದ ಪ್ಲಾಂಟುಗಳು ಸಹ ಬಂದ್ ಮಾಡುವ ಪ್ರಯತ್ನದಲ್ಲಿದ್ದಾರೆ. ಮತ್ತು ಅದರ ಬದಲಿ ಪರಿಹಾರ ಹುಡುಕುತ್ತಿದ್ದಾರೆ. ಆದರೆ ಅದು ಸಮಯಕ್ಕೆ ಬಿಟ್ಟ ವಿಚಾರ. ಜರ್ಮನಿ ಈಗ ಒಂದು ಕಾನೂನು ರೂಪಿಸಿದರೆ, ಸದ್ಯ ಅದರ ಮೇಲೆ ಕೆಲಸ ನಡೆಯುತ್ತಿದೆ. ಪ್ರಯತ್ನ ಮಾಡುತ್ತಿದ್ದಾರೆ. ಸಂಪೂರ್ಣ ಅದನ್ನು ಬಂದ್ ಮಾಡಬೇಕು.

ಹುಝೂರ್ ಹೇಳಿದರು. ಹೌದು ವಿದ್ಯುತ್ ಅಂತೂ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

**ವಿಷೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**
**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.